ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು

ADIKAVI SRI MAHARSHI VALMIKI UNIVERSITY, RAICHUR

ಯರಗೇರಾ-584133, ರಾಯಚೂರು, ಕರ್ನಾಟಕ ರಾಜ್ಯ, ಭಾರತ

ಆಡಳಿತ ವಿಭಾಗ E-mail: registrarrur@gmail.com

ಕ್ರ. ಸಂ. ಆಶ್ರೀಮವಿರಾ/ಆಡಳಿತ/2025-26/ 2546 ದಿನಾಂಕ: 14/1/26

ವಿಷಯ : ದಿನಾಂಕ 07.01.2026 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಕಳಿಸುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 07.01.2026 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಅವಗಾಹನೆಗಾಗಿ ಸಲ್ಲಿಸಲಾಗಿದೆ.

14/1

ಕುಲಸಚಿವರು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ,
ರಾಯಚೂರು.

ಕುಲಸಚಿವರು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ
ರಾಯಚೂರು

ಇವರಿಗೆ :

01. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು-560001.
02. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯಗಳು), ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಬೆಂಗಳೂರು-560001.
03. ವಿಶ್ವವಿದ್ಯಾನಿಲಯದ ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ
04. ಆಯುಕ್ತರ/ಜಂಟಿ ನಿರ್ದೇಶಕರು ಕಾಲೇಜು ಶಿಕ್ಷಣ ಇಲಾಖೆ, ಕಲಬುರಗಿ.
05. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಪ್ಯಾಲೆಸ್ ರಸ್ತೆ, ಬೆಂಗಳೂರು-560001.
06. ನಿರ್ದೇಶಕರು, ವೈದ್ಯಕೀಯ ಕಾಲೇಜು ಶಿಕ್ಷಣ, ಬೆಂಗಳೂರು-560001.
07. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು-560001
08. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು -560001
09. ಕುಲಸಚಿವರು(ಮೌಲ್ಯಮಾಪನ), ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
10. ಹಣಕಾಸು ಅಧಿಕಾರಿಗಳು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
11. ಮುಖ್ಯಸ್ಥರು/ಸಂಯೋಜಕರು ಎಲ್ಲಾ ಅಧ್ಯಯನ ವಿಭಾಗಗಳು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ ರಾಯಚೂರು.
12. ವಿದ್ಯಾರ್ಥಿ ಕಲ್ಯಾಣ ಅಧಿಕಾರಿಗಳು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
13. ಉಪ ಕುಲಸಚಿವರು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
14. ನಿರ್ದೇಶಕರು, ಕಾ.ಅ.ಮಂ., ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
15. ಗ್ರಂಥಪಾಲಕರು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
16. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
17. ಸಂಯೋಜಕರು, ಕ್ರೀಡಾ ವಿಭಾಗ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
18. ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
19. ಕಛೇರಿ ಪ್ರತಿ.

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು
ADIKAVI SRI MAHARSHI VALMIKI UNIVERSITY, RAICHUR
ಮಂತ್ರಾಲಯ ರಸ್ತೆ, ರಾಯಚೂರು
ಆಡಳಿತ ವಿಭಾಗ

ದಿನಾಂಕ 07.01.2026 ರಂದು ಬುಧವಾರ ಬೆಳಗ್ಗೆ 11:00 ಗಂಟೆಗೆ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಆಡಳಿತ ಕಛೇರಿಯಲ್ಲಿರುವ "ಸಿಂಡಿಕೇಟ್ ಸಭಾಂಗಣ"ದಲ್ಲಿ ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳು.

**ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು :**

1) ಡಾ. ಶಿವಾನಂದ ಕೆಳಗಿನಮನಿ, ಗೌರವಾನ್ವಿತ ಕುಲಪತಿಗಳು – ಅಧ್ಯಕ್ಷರು
2) ಡಾ. ಕೆ. ವೆಂಕಟೇಶ್, ಡೀನರು: ಸಮಾಜ ವಿಜ್ಞಾನ ನಿಕಾಯ – ಸದಸ್ಯರು
3) ಡಾ. ನಾಗರತ್ನ ಎಂ. ನಾಯ್ಕ್ – ಸದಸ್ಯರು
4) ಶ್ರೀ ಶ್ರೇಯಂಕ್ ಹೆಚ್. ವಿ. – ಸದಸ್ಯರು
5) ಡಾ. ಮೀನಾಕ್ಷಿ ಖಂಡಿಮಠ – ಸದಸ್ಯರು
6) ಶ್ರೀ ಡಿ.ಆರ್. ಚಿನ್ನ – ಸದಸ್ಯರು
7) ಶ್ರೀ ಜೀಶಾನ್ ಅಖಿಲ್ ಸಿದ್ದಿಖಿ – ಸದಸ್ಯರು
8) ಶ್ರೀ ಶಿವಣ್ಣ ತಂದೆ ಬುಡ್ಡಪ್ಪ ತಪ್ಪಲದೊಡ್ಡಿ – ಸದಸ್ಯರು
9) ಶ್ರೀ ಚನ್ನಬಸವ ತಂದೆ ಬಸವರಾಜಪ್ಪ – ಸದಸ್ಯರು
10) ಶ್ರೀ ಚಂದ್ರಶೇಖರ ಲಿಂಗದಳ್ಳಿ – ಸದಸ್ಯರು
11) ಪ್ರೊ. ಪಾರ್ವತಿ ಸಿ.ಎಸ್., ಡೀನರು: ಶಿಕ್ಷಣ ನಿಕಾಯ (ಪ್ರಭಾರ) – ಸದಸ್ಯರು
12) ಡಾ. ಸುಯಮೀಂದ್ರ ಕುಲಕರ್ಣಿ ಡೀನರು: ವಿಜ್ಞಾನ ನಿಕಾಯ – ಸದಸ್ಯರು
13) ಪ್ರೊ. ಜ್ಯೋತಿ ದಮ್ಮ ಪ್ರಕಾಶ್, ಕುಲಸಚಿವರು (ಮೌಲ್ಯಮಾಪನ) – ಸದಸ್ಯರು
14) ಡಾ. ಚನ್ನಪ್ಪ ಎ., ಕೆ.ಎ.ಎಸ್. (ಸೀನಿಯರ್ ಸೂಪರ್ ಟೈಂ ಸ್ಕೇಲ್) – ಸದಸ್ಯ ಕಾರ್ಯದರ್ಶಿಗಳು

ಆರಂಭದಲ್ಲಿ ಕುಲಪತಿಗಳು ಹಾಜರಿದ್ದ ಎಲ್ಲಾ ಸಿಂಡಿಕೇಟ್ ಸದಸ್ಯರನ್ನು ಸ್ವಾಗತಿಸುತ್ತಾ ಸಭೆಯನ್ನು ನಡೆಸಲು ಕುಲಸಚಿವರಿಗೆ ವಹಿಸಿದರು. ಕುಲಸಚಿವರು ಸಭೆಯ ಕಾರ್ಯಸೂಚಿಯ ಪ್ರಕಾರವಾಗಿ ಸಭೆಯ ಮುಂದೆ ವಿಷಯಗಳನ್ನು ಮಂಡಿಸಿದರು.

**ವಿಷಯ ಕ್ರಮಾಂಕ 1**

ದಿನಾಂಕ 11.09.2025ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಪಾಲನಾ ವರದಿ ಕುರಿತು ಚರ್ಚೆ:

**ನಿರ್ಣಯ:**

ಈ ವಿಷಯ ಕುರಿತು ಸುದೀರ್ಘವಾಗಿ ಚರ್ಚಿಸಲಾಗಿ ದೃಢೀಕರಿಸಲಾಯಿತು.

**ವಿಷಯ ಕ್ರಮಾಂಕ 2**

ದಿನಾಂಕ 12.11.2025ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಕುರಿತು:

**ಚರ್ಚೆ:**

ದಿನಾಂಕ 12.11.2025 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಸಂದರ್ಭದಲ್ಲಿ ಶ್ರೀ ಜಿಶಾನ್ ಅಖಿಲ್ ಸಿದ್ದಿಖಿ ಇವರು ವಿಷಯ ಕ್ರಮಾಂಕ 12ರ ವಿಷಯವು ಸಿಂಡಿಕೇಟ್

ಸಭೆಯಲ್ಲಿ ಚರ್ಚೆಯಾಗಿರುವುದಿಲ್ಲ. ಕಾರಣ, ಸದರಿ ವಿಷಯವನ್ನು ಈ ಸಿಂಡಿಕೇಟ್‌ನಲ್ಲಿ ಚರ್ಚಿಸಲು ಅವಕಾಶ ನೀಡಬೇಕೆಂದು ಕೋರಿದರು. ಇದಕ್ಕೆ ಉತ್ತರವಾಗಿ ಮಾನ್ಯ ಕುಲಸಚಿವರು ವಿಷಯ ಕ್ರಮಾಂಕವನ್ನು ಚರ್ಚಿಸಲಾಗಿದ್ದು ಸದರಿ ವಿಷಯದ ನಿರ್ಣಯದಲ್ಲಿ ಯಾವುದಾದರು ಬದಲಾವಣೆಗಳಿದ್ದರೆ ತಿಳಿಸಲು ಸೂಚಿಸಿದರು. ಮುಂದುವರೆದು, ಸದರಿ ವಿಷಯವನ್ನು ಮತ್ತೊಮ್ಮೆ ಕೂಲಂಕುಷವಾಗಿ ಚರ್ಚಿಸಲು ಅವಕಾಶ ನೀಡಬೇಕೆಂದು ಸಿಂಡಿಕೇಟ್ ಸದಸ್ಯರುಗಳಾದ ಶ್ರೀ ಜಿಶಾನ್ ಅಖಿಲ್ ಸಿದ್ದಿಖಿ ಹಾಗೂ ಶ್ರೀ ಡಿ.ಆರ್.ಚಿನ್ನ ಕೇಳಿದರು.

ನಿರ್ಣಯ:

**ಮಾನ್ಯ ಕುಲಸಚಿವರು ಅಧ್ಯಕ್ಷರ ಅಪ್ಪಣೆಯನುಸಾರ ಇತರ ವಿಷಯಗಳ ಚರ್ಚೆಯ ಸಂದರ್ಭದಲ್ಲಿ ಸದರಿ ವಿಷಯವನ್ನು ಚರ್ಚಿಸಲು ಅವಕಾಶ ನೀಡಲಾಗುವುದು ಎಂದು ತಿಳಿಸಿದರು.**

**ಚರ್ಚೆ :**

ಡಾ. ಮೀನಾಕ್ಷಿ ಖಂಡಿಮಠ ರವರು ವಿಷಯ ಕ್ರಮಾಂಕ ಕ್ರಮ ಸಂಖ್ಯೆ 7 & 9ರ ವಿಷಯಗಳು ಘಟಿಕೋತ್ಸವಕ್ಕೆ ಸಂಬಂಧಿಸಿದ ವಿಷಯಗಳಾಗಿದ್ದು ಎರಡು ವಿಷಯ ಕ್ರಮಾಂಕಗಳಲ್ಲಿ ಚರ್ಚಿಸಲಾಗಿರುತ್ತದೆ. ಹಾಗೂ ವಿಷಯಗಳು ಪುನರಾವರ್ತನೆಯಾಗಿದ್ದು ಕಂಡುಬಂದಿರುತ್ತದೆ. ಕಾರಣ, ಸದರಿ ಎರಡು ವಿಷಯಗಳನ್ನು ಒಂದೇ ವಿಷಯವನ್ನಾಗಿ ಪರಿಗಣಿಸುವುದು ಸೂಕ್ತ ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಮುಂದುವರೆದು, ವಿಶ್ವವಿದ್ಯಾನಿಲಯದ ಪ್ರಥಮ ಘಟಿಕೋತ್ಸವವನ್ನು ಆದಷ್ಟು ಬೇಗ ಜರುಗಿಸಬೇಕೆಂದು ಕೇಳಿಕೊಂಡರು. ಇದಕ್ಕೆ ಉತ್ತರವಾಗಿ ಮಾನ್ಯ ಕುಲಸಚಿವರು ಕ್ರಮ ಸಂಖ್ಯೆ 7 & 9ರ ವಿಷಯವನ್ನು ಕ್ರೋಢೀಕರಿಸಲಾಗುವುದು ಎಂದು ತಿಳಿಸಿದರು. ಮುಂದುವರೆದು, ಪ್ರಥಮ ಘಟಿಕೋತ್ಸವವನ್ನು ಜರುಗಿಸುವ ಸಂಬಂಧ ಮಾನ್ಯ ಕುಲಸಚಿವರು (ಮೌಲ್ಯಮಾಪನ) ಇವರು ಉತ್ತರಿಸುತ್ತ ಈಗಾಗಲೇ ಘಟಿಕೋತ್ಸವವಕ್ಕೆ ಸಂಬಂಧಿಸಿದಂತೆ ಶೇಕಡಾ 80% ರಷ್ಟು ಕಾರ್ಯಗಳು ಈಗಾಗಲೇ ಪೂರ್ಣಗೊಂಡಿದ್ದು ವಿಶ್ವವಿದ್ಯಾನಿಲಯದಲ್ಲಿ ಇದು ಪ್ರಥಮ ಘಟಿಕೋತ್ಸವವಾಗಿದ್ದು ಸದರಿ ಘಟಿಕೋತ್ಸವದ ಪೂರ್ವ ಸಿದ್ಧತಾ ಕಾರ್ಯಗಳನ್ನು ನಿರ್ವಹಿಸಲು ಈಗಾಗಲೇ ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸಿ ವಯೋನಿವೃತ್ತಿಹೊಂದಿದ ಅನುಭವಿ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

ನಿರ್ಣಯ:

**ಸಭೆಯು ಸದರಿ ವಿಷಯವನ್ನು ಚರ್ಚಿಸಿದ ನಂತರ ಅನುಮೋದನೆಯನ್ನು ನೀಡಿತು.**

**ಚರ್ಚೆ :**

ಶ್ರೀ ಚಂದ್ರಶೇಖರ ಲಿಂಗದಳ್ಳಿ ಇವರು ಅಧ್ಯಕ್ಷರ ಅನುಮತಿಯ ಮೇರೆಗೆ ಚರ್ಚಿಸಲಾದ ವಿಷಯ ಕ್ರಮಾಂಕ 13ರ ಉಪ ವಿಷಯ ಕ್ರಮಾಂಕ 2ರಲ್ಲಿ ತೀರ್ಮಾನಿಸುವಂತೆ ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ ಆಸನ ಭತ್ಯೆಯ ಮೊತ್ತವನ್ನು ರೂ. 4000/- ಹೆಚ್ಚಿಸಿದ್ದನ್ನು ಮರು ಪರಿಶೀಲಿಸಿ ಈಗಾಗಲೇ ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಸಿಂಡಿಕೇಟ್ ಸದಸ್ಯರುಗಳ ಆಸನ ಭತ್ಯೆಯು ರೂ. 6000/- ಇರುತ್ತದೆ ಮತ್ತು ಪ್ರಯಾಣ ಭತ್ಯೆಯು ಸ್ಥಳೀಯ ಸದಸ್ಯರುಗಳಿಗೆ ರೂ. 9000/- ರಂತೆ ಹಾಗೂ ಬೇರೆ ಜಿಲ್ಲೆಗಳಿಂದ ಆಗಮಿಸುವ ಸದಸ್ಯರುಗಳಿಗೆ ಪ್ರತಿ ಕಿ.ಮೀ. ಗೆ ರೂ. 15/- ರಂತೆ ನೀಡಲಾಗುತ್ತಿದ್ದು ಸದರಿ ಆದೇಶದಂತೆ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರುಗಳಿಗೆ ನೀಡಬೇಕೆಂದು ತಿಳಿಸಿದರು. ಇದಕ್ಕೆ ಉತ್ತರವಾಗಿ ಕುಲಸಚಿವರುಗಳು ಮಾನ್ಯ ಕುಲಪತಿಗಳ ನಿರ್ದೇಶನವನ್ನು ಕೇಳಿ ಮಾನ್ಯ ಕುಲಪತಿಗಳ ನಿರ್ದೇಶನದನುಸಾರ ಈ ಕೆಳಗಿನಂತೆ ನಿರ್ಣಯವನ್ನು ತಿಳಿಸಿದರು.

ನಿರ್ಣಯ:

**ಸಿಂಡಿಕೇಟ್ ಸಭೆಯಲ್ಲಿ ಹಾಜರಾದ ಸದಸ್ಯರುಗಳಿಗೆ ಆಸನ ಭತ್ಯೆಯನ್ನು ರೂ. 6000/- ರಂತೆ ಹೆಚ್ಚಿಸುತ್ತಾ ಸದರಿ ಆಸನ ಭತ್ಯೆಯು ದಿನಾಂಕ 11.12.2025 ರ ಸಭೆಯಿಂದ ಅನ್ವಯವಾಗುವಂತೆ ಹಾಗೂ ಸದರಿ ಹೆಚ್ಚುವರಿ ಆಸನ ಭತ್ಯೆಯನ್ನು ಲೆಕ್ಕ ಪರಿಶೋಧಕರ ಆಕ್ಷೇಪಣೆಯ ಷರತ್ತಿಗೆ ಒಳಪಟ್ಟು ಪರಿಷ್ಕರಿಸಲು ತೀರ್ಮಾನಿಸಲಾಯಿತು. ಮುಂದುವರೆದು, ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ನೀಡುವ ಪ್ರಯಾಣ ಭತ್ಯೆಯ ಆದೇಶವನ್ನು ತೆಗೆದುಕೊಂಡು ಅದರನುಸಾರ ನೀಡಲು ತೀರ್ಮಾನಿಸಲಾಯಿತು.**

**ವಿಷಯ ಕ್ರಮಾಂಕ 3**

ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಶುಲ್ಕಗಳ ಕುರಿತು ಚರ್ಚೆ:

**ಚರ್ಚೆ :**

ಈ ವಿಷಯವಾಗಿ ಚರ್ಚಿಸುತ್ತಾ ಮಾನ್ಯ ಕುಲಸಚಿವರು ವಿಶ್ವವಿದ್ಯಾನಿಲಯವು ತನ್ನ ದೈನಂದಿನ ಕಾರ್ಯಚಟುವಟಿಕೆಗಳಿಗೆ ತಗಲುವ ವೆಚ್ಚ ಹಾಗೂ ಅತಿಥಿ ಉಪನ್ಯಾಸಕರ, ಹೊರಗುತ್ತಿಗೆ ಸಿಬ್ಬಂದಿಗಳ ವೇತನ ಇನ್ನಿತರ ಖರ್ಚುಗಳನ್ನು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲಗಳಿಂದಲೇ ಭರಿಸಬೇಕಾಗಿರುತ್ತದೆ. ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲಗಳಲ್ಲಿ ಅತ್ಯಧಿಕ ಪಾಲು ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಶುಲ್ಕದಿಂದ ವಿಶ್ವವಿದ್ಯಾನಿಲಯಕ್ಕೆ ಸಂದಾಯವಾಗುತ್ತದೆ. ಆದರೆ ವಿಶ್ವವಿದ್ಯಾನಿಲಯದ ಸಂಯೋಜನೆಗೆ ಒಳಪಟ್ಟ ಸ್ನಾತಕೋತ್ತರ ಕಾಲೇಜುಗಳಲ್ಲಿ ಹೆಚ್ಚಿನ ಕಾಲೇಜುಗಳು 2021-22ನೇ ಸಾಲಿನಿಂದ ವಿದ್ಯಾರ್ಥಿಗಳ ಶುಲ್ಕವನ್ನು ಪೂರ್ಣ ಪ್ರಮಾಣದಲ್ಲಿ ಪಾವತಿ ಮಾಡದೇ ಬಾಕಿಯನ್ನು ಇಟ್ಟುಕೊಂಡಿರುತ್ತವೆ. ಈ ವಿಷಯವಾಗಿ 2022-23 ಹಾಗೂ 2023-24ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ರೂ. 8,67,86,810=00 ಬಾಕಿ ಇರುವುದು ತಿಳಿಸಿರುತ್ತಾರೆ. ಮುಂದುವರೆದು, ಕಾಲೇಜುಗಳಿಗೆ ಬಾಕಿ ಮೊತ್ತವನ್ನು ಪಾವತಿಸಲು ತಿಳಿಸಿದಾಗ ಕೇವಲ ನೊಂದಣಿ ಶುಲ್ಕವನ್ನು ಮಾತ್ರ ಭರಿಸುತ್ತೇವೆ ಎಂದು ತಿಳಿಸಿರುತ್ತಾರೆ. ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ಶುಲ್ಕಗಳಿಗನುಸಾರ ಈಗಾಗಲೇ ಕಾಲೇಜು ಹಾಗೂ ವಿದ್ಯಾರ್ಥಿಗಳಿಗೆ ಶಿಷ್ಯವೇತನವು ಮಂಜೂರಾಗಿರುತ್ತದೆ. ಕಾರಣ, ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ಶುಲ್ಕವನ್ನು ಭರಿಸಲು ತಿಳಿಸುವುದು ಸೂಕ್ತವೆಂದು ಹೇಳಿದರು. ಮುಂದುವರೆದು, ಸಮಾಜ ಕಲ್ಯಾಣ ಇಲಾಖೆ ಹಾಗೂ ಪರಿಶಿಷ್ಟ ವರ್ಗಗಳ ಇಲಾಖೆಗಳ ಕಚೇರಿಯಿಂದ ಮಾಹಿತಿಯನ್ನು ಕೇಳುತ್ತಿದ್ದು ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗಿಂತ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಶುಲ್ಕವು ಅಧಿಕವಾಗಿರುತ್ತದೆ. ಮುಂದುವರೆದು, ಶುಲ್ಕವು ಅಧಿಕವಾಗಿರುವುದರಿಂದ ಸರ್ಕಾರ ನಿಗದಿಪಡಿಸಿರುವ ಏಕರೂಪ ಶುಲ್ಕವನ್ನು ವಿಶ್ವವಿದ್ಯಾನಿಲಯವು ಅಳವಡಿಸಿಕೊಳ್ಳುವುದು ಸೂಕ್ತವೆಂದು ತಿಳಿಸಿದರು. ಸದರಿ ವಿಷಯ ಕುರಿತಂತೆ ಡಾ. ಮೀನಾಕ್ಷಿ ಖಂಡಿಮಠ ರವರು ಪ್ರಸ್ತಾಪ ಮಾಡಿ ಶುಲ್ಕಕ್ಕೆ ಸಂಬಂಧಪಟ್ಟಂತೆ ಮಹಾವಿದ್ಯಾಲಯದ ಆಡಳಿತ ಮಂಡಳಿ ಮತ್ತು ಪ್ರಾಚಾರ್ಯರೊಂದಿಗೆ ಒಂದು ವಿಶೇಷ ಸಭೆಯನ್ನು ಜರುಗಿಸಿ ವಿಶ್ವವಿದ್ಯಾನಿಲಯದ ಅಭಿಪ್ರಾಯಗಳನ್ನು ಪರಾಮರ್ಶಿಸಿ ಶುಲ್ಕ ನಿಗದಿಪಡಿಸುವುದು ಸೂಕ್ತ ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಶ್ರೀ ಜಿಶಾನ್ ಅಖಿಲ್ ಸಿದ್ದಿಖಿ ಅವರು ಸರ್ಕಾರ ಹಾಗೂ ವಿಶ್ವದ್ಯಾಲಯಗಳ ಮೂಲ ಉದ್ಧೇಶ ಏನೆಂದರೆ ಬಡ ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆ ನೀಡುವುದು ಆಗಿರಬೇಕು ಹಾಗಾಗಿ ವಿಶ್ವವಿದ್ಯಾನಿಲಯವುದ ಸರ್ಕಾರದ ನಿರ್ದೇಶನದಂತೆ ಏಕ ರೂಪ ಶುಲ್ಕವನ್ನು ವಿಶ್ವವಿದ್ಯಾನಿಲಯವು ನಿಗದಿಪಡಿಸಬೇಕು ಮತ್ತು ಬಾಕಿಉಳಿಸಿಕೊಂಡಿರುವ ಶುಲ್ಕಗಳನ್ನು ವಿಶ್ವವಿದ್ಯಾನಿಲಯಕ್ಕೆ ಭರಿಸಿಕೊಳ್ಳುವಂತೆ ಕೋರಿದರು.

**ನಿರ್ಣಯ:**

**ಈ ವಿಷಯ ಕುರಿತಂತೆ ಸುದೀರ್ಘವಾಗಿ ಚರ್ಚಿಸಿ ಸಿಂಡಿಕೇಟ್ ಸಭೆಯು ವಿಶ್ವವಿದ್ಯಾನಿಲಯವು ಈಗಾಗಲೇ ನಿಗದಿಪಡಿಸಿದ ಎಸ್‌ಎಸ್‌ಪಿ ಪೋರ್ಟ್ರಾಲ್‌ನಲ್ಲಿ ಅಪ್‌ಲೋಡ್ ಮಾಡಿರುವ ಫೀ ಸ್ಟಕ್ಚರ್ ಪ್ರಕಾರ ಎಲ್ಲಾ ವಿದ್ಯಾರ್ಥಿಗಳಗೆ ಶಿಷ್ಯ ವೇತನ ಮಂಜೂರಾಗಿರುತ್ತದೆ ಮತ್ತು ಖಾಸಗಿ ಕಾಲೇಜುಗಳು ವಿಶ್ವವಿದ್ಯಾನಿಲಯ ನಿಗದಿ ಪಡಿಸಿದ ಶುಲ್ಕವನ್ನು ವಸೂಲಿ ಮಾಡಿರುತ್ತಾರೆ ಇದರನ್ವಯ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿದ ಕಾಲೇಜುವಾರು ಬಾಕಿ ಪಟ್ಟಿಯನ್ವಯ ಶುಲ್ಕಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಂದಾಯ ಮಾಡಿಸಿಕೊಳ್ಳಲು ತಿರ್ಮಾನಿಸಲಾಯಿತು.**

**ಖಾಸಗಿ ಕಾಲೇಜುಗಳು ವಿಶ್ವವಿದ್ಯಾನಿಲಯವು ನಿಗದಪಡಿಸಿರುವ ನೋಂದಣಿ ಶುಲ್ಕ ಮತ್ತು ಪ್ರವೇಶ ಶುಲ್ಕ ಈ ಕುರಿತಾತ ಗೊಂದಲಗಳು ಏರ್ಪಟ್ಟಿರುವುದರಿಂದ ಸರ್ಕಾರಕ್ಕೆ ಸ್ಪಷ್ಟೀಕರಣ ಕೋರಿ ವಿಶ್ವವಿದ್ಯಾನಿಲಯವು ಪತ್ರವನ್ನು ಬರೆಯಲಾಗಿರುತ್ತದೆ ಹಾಗೂ ಸರ್ಕಾರವು ಸಹಾ ಏಕ ರೂಪದ ಶುಲ್ಕವನ್ನು ಅಳವಡಿಸಿಕೊಳ್ಳುವ ಬಗ್ಗೆ ವಿಶ್ವವಿದ್ಯಾನಿಲಯಕ್ಕೆ ಕೆಲವೊಂದು ನಿರ್ದೇಶನಗಳನ್ನು ಸಹಾ ನೀಡಿರುತ್ತದೆ. ಈ ಹಿನ್ನೆಲೆಯಲ್ಲಿ ಮುಂದಿನ ಶೈಕ್ಷಣಿಕ ವರ್ಷ 2026-27ನೇ ಸಾಲಿನಿಂದ ಸರ್ಕಾರ ನಿಗದಿಪಡಿಸಿರುವ ಶುಲ್ಕ ನೀತಿಯನ್ನು ಅಳವಡಿಕೊಳ್ಳುವುದು ಸೂಕ್ತವೆಂದು ಸಭೆಯು ತಿರ್ಮಾನಿಸಿತು.**

**ವಿಷಯ ಕ್ರಮಾಂಕ 4**

ಮಾನ್ಯ ಕುಲಪತಿಗಳ ಕಛೇರಿ ಉಪಯೋಗಕ್ಕಾಗಿ ಹೊಸ ವಾಹನ ಖರೀದಿಸುವ ಕುರಿತು

**ಚರ್ಚೆ:**

ಮಾನ್ಯ ಕುಲಪತಿಗಳು/ ಕುಲಸಚಿವರು (ಆಡಳಿತ)/ಕುಲಸಚಿವರು (ಮೌಲ್ಯಮಾಪನ) ಇವರುಗಳು ವಿಶ್ವವಿದ್ಯಾನಿಲಯದ ಕಚೇರಿ ಕಾರ್ಯದ ನಿಮಿತ್ಯ ರಾಜ್ಯದ ಬೇರೆ ಬೇರೆ ವಿಶ್ವವಿದ್ಯಾಲಯಗಳಿಗೆ ಹಾಗೂ ಬೆಂಗಳೂರಿನ ಉನ್ನತ ಶಿಕ್ಷಣ ಇಲಾಖೆಗೆ ಹೋಗಬೇಕಾಗಿರುತ್ತದೆ. ಈಗಾಗಲೇ ಮಾನ್ಯ ಕುಲಪತಿಗಳ ಕಚೇರಿ ಉಪಯೋಗಕ್ಕಾಗಿ ಇರುವ ವಾಹನವು ಸುಮಾರು 1,80,000 ಕಿ.ಮೀ. ಗಳು ಕ್ರಮಿಸಿರುತ್ತದೆ. ಸದರಿ ವಾಹನವು ಬಹುದೂರದ ಪ್ರಯಾಣಕ್ಕೆ ಯೋಗ್ಯವಲ್ಲದರಿಂದ ಸದರಿ ವಾಹನವನ್ನು ಕುಲಸಚಿವರಿಗೆ ನೀಡಿ ಮಾನ್ಯ ಕುಲಪತಿಗಳ ಕಚೇರಿ ಉಪಯೋಗಕ್ಕಾಗಿ ಹೊಸ ವಾಹನವನ್ನು ಖರೀದಿಸುವುದು ಸೂಕ್ತವೆಂದು ಮಾನ್ಯ ಕುಲಸಚಿವರು ಸಭೆಯಲ್ಲಿ ತಿಳಿಸಿದರು.

**ನಿರ್ಣಯ:**

**ಮಾನ್ಯ ಕುಲಪತಿಗಳ ಕಛೇರಿ ಉಪಯೋಗಕ್ಕಾಗಿ ಹೊಸ ವಾಹನವನ್ನು ನಿಯಮಾನುಸಾರ ಖರೀದಿಸಲು ಅನುಮೋದಿಸಲಾಯಿತು.**

**ವಿಷಯ ಕ್ರಮಾಂಕ 5**

ವಿಶ್ವವಿದ್ಯಾನಿಲಯದ ಖಾಯಂ (OPS) ಅಧಿಕಾರಿಗಳು/ಸಿಬ್ಬಂದಿಗಳ ಪಿಂಚಣಿ ವಂತಿಕೆ ಮೊತ್ತ ಮತ್ತು ರಜಾ ವೇತನ ವಂತಿಕೆ ಮೊತ್ತವನ್ನು ಕ್ರೋಢಿಕರಿಸಲು ಹಣಕಾಸು ಅಧಿಕಾರಿಗಳ ಹೆಸರಿನಲ್ಲಿ ಪ್ರತ್ಯೇಕವಾದ ಬ್ಯಾಂಕ್ ಖಾತೆಯನ್ನು ತೆರೆಯುವ ಕುರಿತು:

**ಚರ್ಚೆ:**

ಗುಲಬರ್ಗಾ ವಿಶ್ವವಿದ್ಯಾಲಯದಿಂದ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯಕ್ಕೆ ಒಟ್ಟು ಎಂಟು ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ವರ್ಗಾವಣೆಗೊಂಡಿರುತ್ತಾರೆ. ಅದರಲ್ಲಿ ಏಳು ಸಿಬ್ಬಂದಿಗಳು (OPS) ಸಿಬ್ಬಂದಿಗಳಾಗಿರುತ್ತಾರೆ. ಇನ್ನುಳಿದಂತೆ ಕರ್ನಾಟಕ ಸರ್ಕಾರದ ಆದೇಶಗಳಿಗನುಸಾರ ವಿಶ್ವವಿದ್ಯಾಲಯದ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುವ ಮಾನ್ಯ ಕುಲಪತಿಗಳು, ಮಾನ್ಯ ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ) ಹಾಗೂ ಹಣಕಾಸು ಅಧಿಕಾರಿಗಳಲ್ಲಿಯೂ ಕೂಡ (OPS) ಸಿಬ್ಬಂದಿಗಳಿರುತ್ತಾರೆ. ಕಾರಣ, (OPS) ಅಧಿಕಾರಿಗಳು/ಸಿಬ್ಬಂದಿಗಳ ಪಿಂಚಣಿ ವಂತಿಕೆ ಮೊತ್ತ ಮತ್ತು ರಜಾ ವೇತನ ವಂತಿಕೆ ಮೊತ್ತವನ್ನು ಕ್ರೋಢೀಕರಿಸಲು ಮಾನ್ಯ ಕುಲಸಚಿವರು ಪ್ರತ್ಯೇಕವಾದ ಬ್ಯಾಂಕ ಖಾತೆಯನ್ನು ತೆರೆಯುವುದು ಅವಶ್ಯವೆಂದು ತಿಳಿಸಿದರು.

**ನಿರ್ಣಯ:**

**ವಿಶ್ವವಿದ್ಯಾನಿಲಯದ ಖಾಯಂ (OPS) ಅಧಿಕಾರಿಗಳು/ಸಿಬ್ಬಂದಿಗಳ ಪಿಂಚಣಿ ವಂತಿಕೆ ಮೊತ್ತ ಮತ್ತು ರಜಾ ವೇತನ ವಂತಿಕೆ ಮೊತ್ತವನ್ನು ವಿಶ್ವವಿದ್ಯಾನಿಲಯ ಆಂತರಿಕ ಸಂಪನ್ಮೂಲಗಳಿಂದ ನೀಡಬೇಕಾಗಿರುವುದರಿಂದ ಸದರಿ ಮೊತ್ತವನ್ನು ಕ್ರೋಢಿಕರಿಸಲು ಹಣಕಾಸು ಅಧಿಕಾರಿಗಳ ಹೆಸರಿನಲ್ಲಿ ಪ್ರತ್ಯೇಕವಾದ ಬ್ಯಾಂಕ್ ಖಾತೆಯನ್ನು ತೆರೆಯಲು ಅನುಮೋದಿಸಲಾಯಿತು.**

**ವಿಷಯ ಕ್ರಮಾಂಕ 6**

ವೈಯಕ್ತಿಕ ಕ್ರೀಡೆಗಳಲ್ಲಿ ವಿಶ್ವವಿದ್ಯಾನಿಲಯವನ್ನು ದಕ್ಷಿಣ ಭಾರತ ಅಂತರ ವಿಶ್ವವಿದ್ಯಾನಿಲಯಗಳ ಮತ್ತು ಅಖಿಲ ಭಾರತ ವಿಶ್ವವಿದ್ಯಾನಿಲಯಗಳ ಮಟ್ಟದ ಸ್ಪರ್ಧೆಗಳಲ್ಲಿ ಸ್ವರ್ಣ ಪದಕ ಗೆದ್ದ ಕ್ರೀಡಾ ಪಟುಗಳಿಗೆ ತಲಾ ಐದು ಲಕ್ಷ ರೂಪಯಿಗಳು, ಬೆಳ್ಳಿ ಪದಕ ಗೆದ್ದ ಕ್ರೀಡಾ ಪಟುಗಳಿಗೆ ತಲಾ ಮೂರು ಲಕ್ಷ ರೂಪಾಯಿಗಳು ಮತ್ತು ಕಂಚಿನ ಪದಕ ಗೆದ್ದ ಕ್ರೀಡಾ ಪಟುಗಳಿಗೆ ಎರಡು ಲಕ್ಷ ರೂಪಾಯಿಗಳು ನಗದು ಬಹುಮಾನವನ್ನು ನೀಡುವ ಕುರಿತು:

**ಚರ್ಚೆ:**

ಈ ವಿಷಯ ಕುರಿತು ಸುದೀರ್ಘವಾಗಿ ಚರ್ಚಿಸಿ ವೈಯಕ್ತಿಕ ಕ್ರೀಡೆಗಳಲ್ಲಿ ದಕ್ಷಿಣ ಭಾರತ ಅಂತರ ವಿಶ್ವವಿದ್ಯಾನಿಲಯಗಳ ಮತ್ತು ಅಖಿಲ ಭಾರತ ವಿಶ್ವವಿದ್ಯಾನಿಲಯಗಳ ಮಟ್ಟದ ಸ್ಪರ್ಧೆಗಳಲ್ಲಿ

ವಿಶ್ವವಿದ್ಯಾಲಯದಿಂದ ಪ್ರತಿನಿಧಿಸಿ ಸ್ವರ್ಣ ಪದಕ/ಬೆಳ್ಳಿ ಪದಕ/ಕಂಚಿನ ಪದಕ ಗೆದ್ದ ಕ್ರೀಡಾ ಪಟುಗಳಿಗೆ ನಗದು ಬಹುಮಾನವನ್ನು ನೀಡಿದಲ್ಲಿ ಕ್ರೀಡಾ ಪಟುಗಳಿಗೆ ಒಂದು ರೀತಿಯ ಪ್ರೋತ್ಸಾಹವನ್ನು ನೀಡಿದಂತಾಗುತ್ತದೆ. ಹಾಗೂ ಹೆಚ್ಚಿನ ಮಟ್ಟದಲ್ಲಿ ವಿದ್ಯಾರ್ಥಿಗಳು ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಲು ಪ್ರೇರೇಪಿಸಿದಂತಾಗುತ್ತದೆ ಎಂದು ಮಾನ್ಯ ಕುಲಸಚಿವರು (ಮೌಲ್ಯಮಾಪನ) ಇವರು ಸಭೆಗೆ ವಿವರಿಸಿದರು. ಈ ಕುರಿತಂತೆ ಸಿಂಡಿಕೇಟ್ ಸದಸ್ಯರುಗಳಾದ ಡಾ. ಮೀನಾಕ್ಷಿ ಖಂಡಿಮಠ ಹಾಗೂ ಶ್ರೀ ಡಿ.ಆರ್. ಚಿನ್ನ ಇವರು ಸದರಿ ಮೊತ್ತವನ್ನು ನೀಡಲು ವಿಶ್ವವಿದ್ಯಾನಿಲಯದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಕೇಳಿದರು. ಮುಂದುವರೆದು, ಮಾನ್ಯ ಕುಲಸಚಿವರು ಆಡಳಿತ ಇವರು ಕ್ರೀಡಾ ಪಟುಗಳಿಗೆ ಬಹುಮಾನವನ್ನು ನೀಡಬಹುದು. ಆದರೆ ಮೊತ್ತವನ್ನು ಪರಿಷ್ಕರಿಸುವುದು ಸೂಕ್ತವೆಂದು ಸಭೆಗೆ ತಿಳಿಸಿದರು. ಇದಕ್ಕೆ ಸದಸ್ಯರುಗಳು ಅನುಮೋದನೆಯನ್ನು ಸೂಚಿಸಿ ಈ ಕೆಳಗಿನಂತೆ ನಿರ್ಣಯವನ್ನು ತೆಗೆದುಕೊಳ್ಳಲಾಯಿತು.

ನಿರ್ಣಯ:

**ಈ ವಿಷಯ ಕುರಿತಂತೆ ಚರ್ಚಿಸಲಾಗಿ ವೈಯಕ್ತಿಕ ಕ್ರೀಡೆಗಳಲ್ಲಿ ವಿಶ್ವವಿದ್ಯಾನಿಲಯವನ್ನು ದಕ್ಷಿಣ ಭಾರತ ಅಂತರ ವಿಶ್ವವಿದ್ಯಾನಿಲಯಗಳ ಮತ್ತು ಅಖಿಲ ಭಾರತ ವಿಶ್ವವಿದ್ಯಾನಿಲಯಗಳ ಮಟ್ಟದ ಸ್ಪರ್ಧೆಗಳಲ್ಲಿ ಸ್ವರ್ಣ ಪದಕ ಗೆದ್ದ ಕ್ರೀಡಾ ಪಟುಗಳಿಗೆ ತಲಾ ಮೂರು ಲಕ್ಷ ರೂಪಯಿಗಳು, ಬೆಳ್ಳಿ ಪದಕ ಗೆದ್ದ ಕ್ರೀಡಾ ಪಟುಗಳಿಗೆ ತಲಾ ಎರಡು ಲಕ್ಷ ರೂಪಾಯಿಗಳು ಮತ್ತು ಕಂಚಿನ ಪದಕ ಗೆದ್ದ ಕ್ರೀಡಾ ಪಟುಗಳಿಗೆ ಒಂದು ಲಕ್ಷ ರೂಪಾಯಿಗಳು ನಗದು ಬಹುಮಾನವನ್ನು ನೀಡಲು ಅನುಮೋದಿಸಲಾಯಿತು.**

**ವಿಷಯ ಕ್ರಮಾಂಕ 7**

ಗುಂಪು ಕ್ರೀಡೆಗಳಲ್ಲಿ ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿ ದಕ್ಷಿಣ ಭಾರತ ಅಂತರ ವಿಶ್ವವಿದ್ಯಾನಿಲಯಗಳ ಮತ್ತು ಅಖಿಲ ಭಾರತ ವಿಶ್ವವಿದ್ಯಾನಿಲಯಗಳ ಮಟ್ಟದ ಪಂದ್ಯಾವಳಿಗಳಲ್ಲಿ ವಿಜೇತ ಕ್ರೀಡಾ ತಂಡಗಳಿಗೆ ಹತ್ತು ಲಕ್ಷ ರೂಪಾಯಿಗಳು, ನಗದು ಬಹುಮಾನವನ್ನು ನೀಡುವ ಕುರಿತು:

ನಿರ್ಣಯ:

**ಈ ವಿಷಯ ಕುರಿತಂತೆ ಚರ್ಚಿಸಲಾಗಿ ಗುಂಪು ಕ್ರೀಡೆಗಳಲ್ಲಿ ವಿಶ್ವವಿದ್ಯಾನಿಲಯವನ್ನು ದಕ್ಷಿಣ ಭಾರತ ಅಂತರ ವಿಶ್ವವಿದ್ಯಾನಿಲಯಗಳ ಮತ್ತು ಅಖಿಲ ಭಾರತ ವಿಶ್ವವಿದ್ಯಾನಿಲಯಗಳ ಮಟ್ಟದ ಸ್ಪರ್ಧೆಗಳಲ್ಲಿ ಸ್ವರ್ಣ ಪದಕ ಗೆದ್ದ ತಂಡಕ್ಕೆ ಐದು ಲಕ್ಷ ರೂಪಯಿಗಳು, ಬೆಳ್ಳಿ ಪದಕ ಗೆದ್ದ ತಂಡಕ್ಕೆ ಮೂರು ಲಕ್ಷ ರೂಪಾಯಿಗಳು ಮತ್ತು ಕಂಚಿನ ಪದಕ ಗೆದ್ದ ತಂಡಕ್ಕೆ ಎರಡು ಲಕ್ಷ ರೂಪಾಯಿಗಳು ನಗದು ಬಹುಮಾನವನ್ನು ನೀಡಲು ಅನುಮೋದಿಸಲಾಯಿತು.**

**ವಿಷಯ ಕ್ರಮಾಂಕ 8**

ವಿಶ್ವವಿದ್ಯಾನಿಲಯದ ಪರೀಕ್ಷಾ ವೇಳಾಪಟ್ಟಿ ಸಮಯದಲ್ಲಿ ದಕ್ಷಿಣ ಭಾರತ ಅಂತರ ವಿಶ್ವವಿದ್ಯಾನಿಲಯಗಳ ಮತ್ತು ಅಖಿಲ ಭಾರತ ವಿಶ್ವವಿದ್ಯಾನಿಲಯಗಳ ಮಟ್ಟದ ಪಂದ್ಯಾವಳಿಗಳಲ್ಲಿ ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸುವ ಕ್ರೀಡಾ ಪಟುಗಳಿಗೆ ವಿಶೇಷ ಪರೀಕ್ಷೆಯನ್ನು ನಡೆಸುವ ಕುರಿತು:

ನಿರ್ಣಯ:

ಈ ವಿಷಯ ಕುರಿತಂತೆ ಚರ್ಚಿಸಲಾಗಿ ಪರೀಕ್ಷಾ ವೇಳಾಪಟ್ಟಿಗಳಿಗನುಸಾರ ಪರೀಕ್ಷೆಗಳು ನಡೆಸುವುದು ನಿಯಮವಾಗಿರುವುದರಿಂದ ವಿಶೇಷ ಪರೀಕ್ಷೆ ನಡೆಸುವುದು ಪ್ರಸ್ತಾವನೆಯನ್ನು ಕೈಬಿಡಲಾಯಿತು ಮತ್ತು ಪರೀಕ್ಷೆಗಳನ್ನು ವೇಳಾಪಟ್ಟಿಗನುಸಾರ ನಡೆಸಲು ನಿರ್ಧರಿಸಲಾಯಿತು.

**ವಿಷಯ ಕ್ರಮಾಂಕ 9**

ಶ್ರೀ ಡಿ.ಆರ್.ಚಿನ್ನ ಸಿಂಡಿಕೇಟ್ ಸದಸ್ಯರ ಇ–ಮೇಲ್ ಪತ್ರ ದಿನಾಂಕ 21.11.2025 ಮತ್ತು 01.12.2025ರ ವಿಷಯಗಳ ಕುರಿತು

**01.** ದಿನಾಂಕ 12.11.2025ರ ಸಿಂಡಿಕೇಟ್ ಸಭೆಯ ನಡಾವಳಿ ವಿಷಯ ಕ್ರಮಾಂಕ 12 ರ ಕುರಿತು.

**ನಿರ್ಣಯ:**

ವಿಷಯ ಕ್ರಮಾಂಕ (2) ರಲ್ಲಿ ಈಗಾಗಲೇ ಈ ವಿಷಯದ ಕುರಿತು ಚರ್ಚಿಸಲಾಗಿದ್ದು ಮಾನ್ಯ ಕುಲಸಚಿವರು ಅಧ್ಯಕ್ಷರ ಅಪ್ಪಣೆಯನುಸಾರ ಇತರ ವಿಷಯಗಳ ಚರ್ಚೆಯ ಸಂದರ್ಭದಲ್ಲಿ ಸದರಿ ವಿಷಯವನ್ನು ಚರ್ಚಿಸಲು ಅವಕಾಶ ನೀಡಲಾಗುವುದು ಎಂದು ತಿಳಿಸಿದರು.

**02.** ಡಿಜಿಟಲ್ ಮೌಲ್ಯಮಾಪನ ಪ್ರಕ್ರಿಯೆಯ ಸೈಬರ್ ಭದ್ರತೆ ಕುರಿತು.

**ಚರ್ಚೆ :**

ಸಿಂಡಿಕೇಟ್ ಸದಸ್ಯರುಗಳಾದ ಡಾ. ಮೀನಾಕ್ಷಿ ಖಂಡಿಮಠ ಇವರು ಚರ್ಚಿಸುತ್ತಾ ಮೌಲ್ಯಮಾಪನಕರಿಗೆ ಪ್ರಸ್ತುತ ನೀಡುತ್ತಿರುವ ಪಾಸ್‌ವರ್ಡ ವ್ಯವಸ್ಥೆಯನ್ನು ಮಾರ್ಪಾಡು ಮಾಡಿ ಮೌಲ್ಯಮಾಪಕರ ಫೇಸ್ ಐಡೆಂಟಿಫಿಕೇಶನ್ ಅಳವಡಿಸುವ ಕುರಿತು ಪರಿಶೀಲಿಸಲು ಸೂಚಿಸಿದರು ಹಾಗೂ ಸಭೆಯು ಮೌಲ್ಯಮಾಪನದ ಪರೀಕ್ಷಾ ಫಲಿತಾಂಶದ ಬಗ್ಗೆ ಬಹಳ ಎಚ್ಚರ ವಹಿಸುವಂತೆ ಸಭೆಯು ಸೂಚಿಸಿತು. ಮುಂದುವರೆದು ಇದೇ ಸಂದರ್ಭದಲ್ಲಿ ಪರೀಕ್ಷಾ ಕೇಂದ್ರಗಳಿಗೆ ವಿಶ್ವವಿದ್ಯಾನಿಲಯದಿಂದ ವೆಬ್ ಕಾಸ್ಟಿಂಗ್ ಅಳವಡಿಸುವುದು ಸೂಕ್ತವೆಂದು ಸಿಂಡಿಕೇಟ್ ಸದಸ್ಯರುಗಳು ತಿಳಿಸಿದರು. ಇದಕ್ಕೆ ಉತ್ತರವಾಗಿ ಮಾನ್ಯ ಕುಲಸಚಿವರು ಸ್ನಾತಕೋತ್ತರ ವಿಷಯಗಳ ಪರೀಕ್ಷೆಗಳಿಗೆ ವೆಬ್ ಕಾಸ್ಟಿಂಗ್ ಮಾಡಬಹುದು ಎಂದು ತಿಳಿಸದರು.

**ನಿರ್ಣಯ :**

ಈ ವಿಷಯವಾಗಿ ಮೌಲ್ಯಮಾಪನ ಕುಲಸಚಿವರು ಡಿಜಿಟಲ್ ಮೌಲ್ಯಮಾಪನಕ್ಕೆ ಸಂಬಂಧಪಟ್ಟಂತೆ ವಿವರಗಳನ್ನು ತಿಳಿಸುತ್ತಾ ಈಗಾಗಲೇ ಟೆಂಡರ್‌ನಲ್ಲಿ ಭಾಗವಹಿಸಿ ಡಿಜಿಟಲ್ ಮೌಲ್ಯಮಾಪನ ಯಾವರೀತಿ ಮಾಡಬೇಕು ಅದಕ್ಕಾಗಿ ಏಜೆನ್ಸಿಯವರಿಗೆ ಸೂಕ್ತ ನಿರ್ದೇಶನಗಳನ್ನು ನೀಡಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು ಹಾಗೂ ಮುಂಬರುವ ಸ್ನಾತಕೋತ್ತರ ಪರೀಕ್ಷೆಗಳಿಗೆ ವೆಬ್ ಕಾಸ್ಟಿಂಗ್ ವ್ಯವಸ್ಥೆಯನ್ನು ಮಾಡಲು ಸಭೆಯು ತಿರ್ಮಾನಿಸಿತು.

**ವಿಷಯ ಕ್ರಮಾಂಕ 10**

ಡಾ. ಮೀನಾಕ್ಷಿ ಖಂಡಿಮಠ ಸಿಂಡಿಕೇಟ್ ಸದಸ್ಯರ ಪತ್ರ ದಿನಾಂಕ 03.12.2025ರಲ್ಲಿ ವಿಶ್ವವಿದ್ಯಾನಿಲಯದ ಟೆಂಡರ್‌ಗಳು, ವೆಚ್ಚಗಳು, ವಿವಿಧ ಸಮಿತಿ ಶಿಫಾರಸ್ಸುಗಳು, ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಕುರಿತು ಮತ್ತು ದಿನಾಂಕ 12.11.2025ರ ವಿಷಯ ಕ್ರಮಾಂಕ 12 ರ ಕುರಿತು ಸಭೆಯಲ್ಲಿ ಮಂಡಿಸಲು ಕೋರಿದ್ದರು. ವಿಷಯಗಳ ಕುರಿತು:

**ಚರ್ಚೆ :**

ಕುಲಸಚಿವರು ಸದರಿ ವಿಷಯಗಳಿಗೆ ಸಂಬಂಧ ಪಟ್ಟಂತೆ ಮಾಹಿತಿಯನ್ನು ವಿವರಿಸುತ್ತಾ ಸಹಾಯಕ ಪ್ರಾಧ್ಯಾಪಕರ ನೇಮಕಾತಿಯ ಕುರಿತು ಯಾವುದೇ ಸಂಶಯಗಳು/ದೂರುಗಳಿದ್ದಲ್ಲಿ ವಿಶ್ವವಿದ್ಯಾನಿಲಯದ ಗಮನಕ್ಕೆ ತರಲು ಕೋರುತ್ತಾ ಅಧ್ಯಕ್ಷರ ಅನುಮತಿಯ ಮೇರೆಗೆ ಹಾಗೂ ಶ್ರೀ ಶ್ರೇಯಾಂಕ್ ಪ್ರಕ್ರಿಯೆಯ ಮಾಹಿತಿಯನ್ನು ಕೋರಿದ್ದರಿಂದ ವಿಶ್ವವಿದ್ಯಾನಿಲಯವು 24 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಸ್ವೀಕರಿಸಿದ ಅರ್ಜಿಗಳನ್ನು ವಿವಿದ ವಿಷಯ ತಜ್ಞರು ಹಾಗೂ ವಿಶ್ವವಿದ್ಯಾನಿಲಯದ ಡೀನ್/ಮುಖ್ಯಸ್ಥರ ಸಮಿತಿಯು ಅರ್ಜಿಗಳನ್ನು ಪರಿಶೀಲಿಸಿ ಈಗಾಗಲೇ ಕೆಇಎ ಮುಖಾಂತರ ನಡೆದ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳು ಹಾಗೂ ಸಹಾಯಕ ಪ್ರಾಧ್ಯಾಪಕರ ನೇಮಕಾತಿ ನಿಯಮಾವಳಿಗಳ ಪ್ರಕಾರ ಶೈಕ್ಷಣಿಕ ಅರ್ಹತೆಯನ್ನು ಹೊಂದಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ ಅಭ್ಯರ್ಥಿಗಳವಾರು ಫಲಿತಾಂಶವನ್ನು ಸಿದ್ಧಪಡಿಸಲಾಗಿದೆ. ದಿನಾಂಕ 03.11.2025ರ ಮಾನ್ಯ ಕುಲಪತಿಗಳು ಹಾಗೂ ನೇಮಕಾತಿ ಪ್ರಾಧಿಕಾರ ಇವರ ನಿರ್ದೇಶನದ ಮೇರೆಗೆ ವಿಶ್ವವಿದ್ಯಾನಿಲಯವು ಕೆಇಎ ಪರೀಕ್ಷೆಯನ್ನು ಬರೆದ ಒಟ್ಟು 1175 ಅಭ್ಯರ್ಥಿಗಳನ್ನು

1. ನಿಗದಿತ ವಿದ್ಯಾರ್ಹತೆಯನ್ನು ಹೊಂದಿರದ ಅನರ್ಹ ಅಭ್ಯರ್ಥಿಗಳ ಪಟ್ಟಿ
2. ಕೆಇಎ ಪರೀಕ್ಷೆಗೆ ಹಾಜರಾಗದೇ ಇರುವ ಅನರ್ಹ ಅಭ್ಯರ್ಥಿಗಳ ಪಟ್ಟಿ
3. ಕೆಇಎ ಪರೀಕ್ಷೆ ಬರೆದು ವಿಶ್ವವಿದ್ಯಾನಿಲಯಕ್ಕೆ ಶೈಕ್ಷಣಿಕ ಅರ್ಹತೆಯ ದಾಖಲೆಗಳನ್ನು ಸಲ್ಲಿಸದ ಅನರ್ಹ ಅಭ್ಯರ್ಥಿಗಳ ಪಟ್ಟಿ

4. ವಿಶ್ವವಿದ್ಯಾನಿಲಯದ ನೇಮಕಾತಿ ಪರಿನಿಯಮಾವಳಿಗಳ ಪ್ರಕಾರ ಕೆಇಎ ಪರೀಕ್ಷೆ ಬರೆದು ಶೈಕ್ಷಣಿಕ ದಾಖಲಾತಿಗಳನ್ನು ಸಲ್ಲಿಸಿದ ಅರ್ಹ ಅಭ್ಯರ್ಥಿಗಳ ಪಟ್ಟಿ ಎಂದು ವಿಂಗಡಿಸಿ ಅಧಿಸೂಚನೆಯನ್ನು ದಿನಾಂಕ 05.11.2025 ರಂದು ಹೊರಡಿಸಲಾಗಿದೆ.

ಈ ಕುರಿತು ಅಭ್ಯರ್ಥಿಗಳಿಗೆ ದಿನಪತ್ರಿಕೆಯಲ್ಲಿ ಪ್ರಕಟಣೆಯನ್ನು ನೀಡಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಶೈಕ್ಷಣಿಕ ಅರ್ಹತೆಗಳಿಗೆ ನೀಡಿದ ಅಂಕಗಳ ಕುರಿತಾಗಿ ಅಭ್ಯರ್ಥಿಗಳಿಂದ ದಿನಾಂಕ 18.11.2025ರವರೆಗೆ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು. ಕೆಲ ಅಭ್ಯರ್ಥಿಗಳು ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ ಆಕ್ಷೇಪಣೆಗಳನ್ನು ಅಭ್ಯರ್ಥಿಗಳ ಅರ್ಜಿಗಳೊಂದಿಗೆ ಪರಿಶೀಲಿಸಿ ಉತ್ತರಗಳನ್ನು ನೀಡಲಾಗಿದೆ. ಆದರೆ ಮಾನ್ಯ ಉಚ್ಚ ನ್ಯಾಯಾಲಯ ಕಲಬುರಗಿ ಈ ಕುರಿತು ಡಬ್ಲೂಪಿ (WP) ಸಂ: 203931/2025 ಹಾಗೂ ಡಬ್ಲೂಎ (WA) ಸಂ: 200007/2006 ರಡಿ ಪ್ರಕರಣಗಳು ದಾಖಲಾಗಿರುವುದರಿಂದ ನ್ಯಾಯಾಲಯದ ಆದೇಶದ ನಿರೀಕ್ಷೆಯಲ್ಲಿ ಇರಿಸಲಾಗಿದೆ ಎಂದು ಕುಲಸಚಿವರು ಸಭೆಗೆ ವಿವರಸಿದರು.

ನಿರ್ಣಯ:

**ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲು ಸಭೆಯು ನಿರ್ಣಯಿಸಿ ಮಾನ್ಯ ಕುಲಪತಿಗಳಿಗೆ ಅಧಿಕಾರ ವಹಿಸಲು ಅನುಮೋದಿಸಿತು.**

**ವಿಷಯ ಕ್ರಮಾಂಕ 10 ಅಧ್ಯಕ್ಷರ ಅನುಮತಿ ಮೇರೆಗೆ ವಿಷಯಗಳು**

(01) ಅತಿಥಿ ಗೃಹ ಕಟ್ಟಡ ನಿರ್ಮಾಣವನ್ನು 4ಜಿ ವಿನಾಯಿತಿ ಇರುವ ಏಜನ್ಸಿಗೆ ನೀಡುವ ಕುರಿತು.

**ಚರ್ಚೆ :**

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯವುದ ಸ್ಥಾಪನೆಯಾಗಿ ಸುಮಾರು 05 ವರ್ಷಗಳು ಕಳೆದಿರುತ್ತವೆ. ವಿಶ್ವವಿದ್ಯಾನಿಲಯದ ಶೈಕ್ಷಣಿಕ ಹಾಗೂ ಪರೀಕ್ಷಾ ಕಾರ್ಯ (ಬಿಓಎಸ್ ಮತ್ತು ಬಿಓಇ) ಗಳಿಗೆ ಬೇರೆ ವಿಶ್ವವಿದ್ಯಾಲಯಗಳಿಂದ ಪ್ರಾಧ್ಯಾಪಕರುಗಳನ್ನು ಆಹ್ವಾನಿಸಲಾಗುತ್ತದೆ ಹಾಗೂ ವಿಶ್ವವಿದ್ಯಾನಿಲಯದಲ್ಲಿ ಜರುಗುವ ವಿಶೇಷ ಉಪನ್ಯಾಸ ಕಾರ್ಯಕ್ರಮಗಳು, ಸಭೆ ಸಮಾರಂಭಗಳಿಗೆ ಆಗಮಿಸುವ ಅತಿಥಿಗಳಿಗೆ ವಿಶ್ವವಿದ್ಯಾನಿಲಯದಲ್ಲಿ ವಾಸ್ತವ್ಯ ಮಾಡಲು ಅತಿಥಿ ಗೃಹದ ಅವಶ್ಯಕತೆ ಇರುತ್ತದೆ ಹಾಗೂ ವಿಶ್ವವಿದ್ಯಾನಿಲಯದ ಪ್ರಥಮ ಘಟಿಕೋತ್ಸವ ಸಮಾರಂಭವನ್ನು ಜರುಗಿಸಲು ಎಲ್ಲಾ ಸಿದ್ದತೆಗಳನ್ನು ಕೈಗೊಳ್ಳಲಾಗಿದ್ದು ಘಟಿಕೋತ್ಸವಕ್ಕೆ ಆಗಮಿಸುವ ಗೌರವಾನ್ವಿತ ರಾಜ್ಯಪಾಲರುಗಳಿಗೆ ಹಾಗೂ ಅಥಿತಿಗಳಿಗೆ ವಿಶ್ವವಿದ್ಯಾನಿಲಯದಲ್ಲಿಯೇ ವಾಸ್ತವ್ಯದ ವ್ಯವಸ್ಥೆಯನ್ನು ಮಾಡಬೇಕಾಗಿರುವುದರಿಂದ ಆದಷ್ಟು ಬೇಗನೆ ವಿಶ್ವವಿದ್ಯಾನಿಲಯದಲ್ಲಿ ಅತಿಥಿ ಗೃಹದ ಕಟ್ಟಡವನ್ನು ನಿರ್ಮಾಣವನ್ನು ಮಾಡಬೇಕಾಗಿರುತ್ತದೆ. ಕಾರಣ 4ಜಿ ವಿನಾಯಿತಿ ಇರುವ ಏಜನ್ಸಿಯವರಿಗೆ ಅತಿಥಿ ಗೃಹದ ಕಟ್ಟಡ ನಿರ್ಮಾಣದ ಕಾರ್ಯವನ್ನು ವಹಿಸುವುದು ಸೂಕ್ತವೆಂದು ಮಾನ್ಯ ಕುಲಸಚಿವರು ಸಭೆಗೆ ತಿಳಿಸಿದರು

**ನಿರ್ಣಯ :**

**ಅತಿಥಿ ಗೃಹ ಕಟ್ಟಡ ನಿರ್ಮಾಣವನ್ನು 4ಜಿ ವಿನಾಯಿತಿ ಇರುವ ಏಜನ್ಸಿಗೆ ನೀಡಲು ಸಭೆಯು ಅನುಮೋದನೆಯನ್ನು ನೀಡಿತು.**

(02) ಸರ್ಕಾರದಿಂದ ಬಿಡುಗಡೆಯಾದ ಮೊತ್ತದಲ್ಲಿ ಮಹಿಳಾ ಸಿಬ್ಬಂದಿ/ವಿದ್ಯಾರ್ಥಿನಿಯರ ವಿಶಾಂತ್ರಿ ಗೃಹ ನಿರ್ಮಿಸುವ ಕುರಿತು.

**ಚರ್ಚೆ :**

ಸರ್ಕಾರ ಆದೇಶ ಸಂ: ಇಡಿ 125/ಹೆಚ್‌ಪಿಯು 2025 ದಿನಾಂಕ 21.10.2025ರನ್ವಯ ಉನ್ನತ ಶಿಕ್ಷಣ ಇಲಾಖೆಯಿಂದ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಅಭಿವೃದ್ಧಿಗಾಗಿ ಷರತ್ತುಗಳನ್ನು ವಿಧಿಸಿ ರೂ. 75 ಲಕ್ಷಗಳನ್ನು ಬಿಡುಗಡೆಗೊಳಿಸಿರುತ್ತಾರೆ. ಸದರಿ ಮೊತ್ತವನ್ನು ವಿಶ್ವವಿದ್ಯಾನಿಲಯದಲ್ಲಿ ಇರುವ ಮಹಿಳಾ ಸಿಬ್ಬಂದಿ ಮತ್ತು ವಿದ್ಯಾರ್ಥಿನಿಯರಿಗೆ ಪ್ರತ್ತೇಕವಾದ ವಿಶ್ರಾಂತಿ ಮತ್ತು ವಿವಿದ ಚಟುವಟಿಕೆಗಳಿಗೆ ಯುಜಿಸಿ ನಿಯಮಾನುಸಾರ ಪ್ರತ್ತೇಕವಾದ ಕಟ್ಟಡವನ್ನು ನಿರ್ಮಾಣ ಮಾಡಬೇಕಾಗಿದ್ದು

ಇದನ್ನು ಮಾರ್ಚ್ ಅಂತ್ಯದ ಒಳಗೆ ವೆಚ್ಚ ಮಾಡಬೇಕಾಗಿರುವುದರಿಂದ 4ಜಿ ವಿನಾಯಿತಿ ಇರುವ ಎಜೆನ್ಸಿಗೆ ನಿರ್ಮಾಣ ಕಾರ್ಯವನ್ನು ವಹಿಸಬಹುದು ಕುಲಸಚಿವರು ಸಭೆಗೆ ತಿಳಿಸಿದರು.

**ನಿರ್ಣಯ :**

**ಸದರಿ ಮೊತ್ತಕ್ಕೆ ಕ್ರಿಯಾ ಯೋಜನೆ ತಯಾರಿಸಿ 4ಜಿ ವಿನಾಯಿತಿ ಇರುವ ಏಜನ್ಸಿಗೆ ನೀಡಲು ಸಭೆಯು ಅನುಮೋದನೆಯನ್ನು ನೀಡಿತು.**

(03) ವಿಶ್ವವಿದ್ಯಾನಿಲಯದ ಆವರಣದಲ್ಲಿ ಉಪಹಾರ ಗೃಹ ನಿರ್ಮಿಸುವ ಕುರಿತು.

**ಚರ್ಚೆ :**

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯವುದ ಸ್ಥಾಪನೆಯಾಗಿ ಸುಮಾರು 05 ವರ್ಷಗಳು ಕಳೆದಿರುತ್ತವೆ. ವಿಶ್ವವಿದ್ಯಾನಿಲಯದ ಶೈಕ್ಷಣಿಕ ಹಾಗೂ ಪರೀಕ್ಷಾ ಕಾರ್ಯ (ಬಿಓಎಸ್ ಮತ್ತು ಬಿಓಇ) ಗಳಿಗೆ ಆಗಮಿಸುವ ಪ್ರಾಧ್ಯಾಪಕರುಗಳಿಗೆ ಹಾಗೂ ವಿಶ್ವವಿದ್ಯಾನಿಲಯದಲ್ಲಿ ಜರುಗುವ ವಿಶೇಷ ಉಪನ್ಯಾಸ ಕಾರ್ಯಕ್ರಮ ಸಭೆ ಸಮಾರಂಭಗಳಿಗೆ ಊಟ ಮತ್ತು ಉಪಹಾರದ ವ್ಯವಸ್ಥೆಯನ್ನು ಮಾಡಲು ವಿಶ್ವವಿದ್ಯಾನಿಲಯದಲ್ಲಿ ಉಪಹಾರ ಗೃಹವನ್ನು ನಿರ್ಮಾಣ ಮಾಡುವುದು ಅವಶ್ಯಕವಾಗಿರುತ್ತದೆ ಇದನ್ನು 4ಜಿ ವಿನಾಯಿತಿ ಇರುವ ಏಜನ್ಸಿಗೆ ನೀಡಲು ಎಂದು ಸಭೆಗೆ ಮಾನ್ಯ ಕುಲಸಚಿವರು ತಿಳಿಸಿದರು.

**ನಿರ್ಣಯ :**

**ಉಪಹಾರ ಗೃಹ ನಿರ್ಮಿಸಲು ಕ್ರಿಯಾ ಯೋಜನೆ ತಯಾರಿಸಿ 4ಜಿ ವಿನಾಯಿತಿ ಇರುವ ಏಜನ್ಸಿಗೆ ನೀಡಲು ಸಭೆಯು ಅನುಮೋದನೆಯನ್ನು ನೀಡಿತು.**

(04) ಡಾ. ನಾಗರತ್ನ ಎಂ. ನಾಯ್ಕ್, ಸಿಂಡಿಕೇಟ್ ಸದಸ್ಯರ ಪತ್ರ ದಿನಾಂಕ 05.01.2026 ಅವರು ಮಂಡಿಸಿದ ಪ್ರಸ್ತಾವನೆ ಕಾರ್ಯಸೂಚಿಯನ್ನು PDF Version ನ್ನು E-Mail ಮೂಲಕ ಕಳುಹಿಸುವ ಬಗ್ಗೆ, ವಿಶ್ವವಿದ್ಯಾನಿಲಯದಲ್ಲಿ Integrated B.Ed Course ಸ್ಥಾಪಿಸುವ ಬಗ್ಗೆ, ನೀರಿನ ಸಮಸ್ಯೆ ಬಗ್ಗೆ, ಸಭೆ ಸಮಾರಂಭಗಳಲ್ಲಿ/ವಿಚಾರ ಸಂಕೀರ್ಣಗಳಲ್ಲಿ/ವಿಶೇಷ ಉಪನ್ಯಾಸ ಕಾರ್ಯಕ್ರಮಗಳಲ್ಲಿ ಸಿಂಡಿಕೇಟ್ ಸದಸ್ಯರುಗಳನ್ನು ಆಹ್ವಾನಿಸು ಬಗ್ಗೆ ಹಾಗೂ ವಿಶ್ವವಿದ್ಯಾನಿಲಯದ ಸಿಬ್ಬಂದಿಗಳ ಕುರಿತು ನೀಡಿದ ಪತ್ರಕ್ಕೆ ಸಂಬಂಧಿಸಿದ ಕುರಿತು.

**ನಿರ್ಣಯ :**

ಮಾನ್ಯ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸಲಾಗಿ ವಿಶ್ವವಿದ್ಯಾನಿಲಯವು ಕರ್ನಾಟಕ ವಿಶ್ವವಿದ್ಯಾನಿಲಯ ಅಧಿನಿಯಮ 2000 ಅನ್ವಯ ಸಿಂಡಿಕೇಟ್ ಸಭೆಯನ್ನು ಜರುಗಿಸಲಾಗುತ್ತಿದೆ ಹಾಗೂ ಎನ್‌ಸಿಟಿಇ ವತಿಯಿಂದ ಪ್ರಸ್ತುತ ಬಿ.ಎಡ್ ಕೋರ್ಸುಗಳಿಗೆ ನೀಡುತ್ತಿರುವ ಪರವಾನಿಗೆಯಲ್ಲಿ 2030 ರ ನಂತರ Integrated B.Ed Course ಆಗಿ ಮಾರ್ಪಾಡು ಮಾಡಲಾಗುವುದೆಂದು ತಿಳಿಸಿರುವುದರಿಂದ ವಿಶ್ವವಿದ್ಯಾನಿಲಯದ ಹಂತದಲ್ಲಿ ಕೈಗೊಳ್ಳಬೇಕಾದ ಕ್ರಮವಿರುವುದಿಲ್ಲ ಎಂದು ತಿಳಿಸಿದರು. ನಂತರ ವಿಶ್ವವಿದ್ಯಾನಿಲಯದ ಕುಡಿಯುವ ನೀರಿನ ಸಮಸ್ಯೆ ದೈನಂದಿನ ನೀರಿನ ಸಮಸ್ಯೆ ಹೆಚ್ಚಾಗಿರುವುದನ್ನು ಗಮನಿಸಿ ಪ್ರಸ್ತುತ ಅವಧಿಯಲ್ಲಿ 03 ಬೋರ್‌ವೆಲ್‌ಗಳನ್ನು ಕೊರಸಲಾಗಿದೆ ಅದರಲ್ಲಿ 01 ಬೋರ್‌ವೆಲ್‌ನಲ್ಲಿ ನೀರಿನ ಪ್ರಮಾಣ ಸುಮಾರು 2 ಇಂಚುಗಳಷ್ಟು ದೊರೆತಿದ್ದು ಅದಕ್ಕೆ ಮೋಟರ್‌ನ್ನು ಅಳವಡಿಸಿ ಮತ್ತು ಆರ್‌ಓ ಪ್ಲಾಂಟ್‌ನ್ನು ಅಳವಡಿಸಿ ಕುಡಿಯುವ ನೀರಿನ ವ್ಯವಸ್ಥೆಯನ್ನು ವಸತಿನಿಲಯದ ವಿದ್ಯಾರ್ಥಿಗಳಿಗೆ ಹಾಗೂ ವಿಶ್ವವಿದ್ಯಾನಿಲಯದ ಸಿಬ್ಬಂದಿಗಳಿಗೆ ಮಾಡಲಾಗುವುದು ಎಂದು ತಿಳಿಸಿದರು ಹಾಗೆಯೇ ಸಭೆಯ ಅಧ್ಯಕ್ಷರು ಸಿಂಡಿಕೇಟ್ ಸದಸ್ಯರುಗಳ ಶಿಷ್ಟಾಚಾರದ ಬಗ್ಗೆ ತಿಳಿಸುತ್ತಾ ವಿಶ್ವವಿದ್ಯಾನಿಲಯದ ಮಟ್ಟದ ಕಾರ್ಯಕ್ರಮಗಳಿಗೆ ಆಹ್ವಾನಿಸಲಾಗುವುದು ವಿಭಾಗ ಮಟ್ಟದ ವಿಚಾರ ಸಂಕೀರ್ಣ/ಗೋಷ್ಠಿಗಳಿಗೆ ಮಾಹಿತಿಗಾಗಿ ತಿಳಿಸಲಾಗುವುದು ಎಂದು ಸಭೆಗೆ ತಿಳಿಸಿದರು ಆದರೆ ಸಿಂಡಿಕೇಟ್ ಸದಸ್ಯರೊಬ್ಬರು ಪ್ರಶ್ನಾರ್ಥಕ ಚಿಹ್ನೆಗಳ ಮೂಲಕ ಸಭೆಯ ಅಧ್ಯಕ್ಷರನ್ನು ಪ್ರಶ್ನಿಸುವುದು ಸೂಕ್ತವಲ್ಲ ಎಂದು ತಿಳಿಸಿದರು ಹಾಗೆಯೇ ವಿಶ್ವವಿದ್ಯಾನಿಲಯದ ಸೇವೆ ಸಲ್ಲಿಸುತ್ತಿರುವ ಸಹ ಪ್ರಾಧ್ಯಾಪಕರುಗಳು ಇವರಿಗೆ ನೀಡಿರುವ ಹೆಚ್ಚುವರಿ ಜವಾಬ್ದಾರಿಯ ಬಗ್ಗೆ ಮತ್ತು ದೈನಂದಿನ ಹಾಜರಾತಿಯ ಬಗ್ಗೆ ಚರ್ಚಿಸಿದಾಗ ಸಿಡಿಸಿ ಪ್ರಭಾರ ನಿರ್ದೇಶಕರಾದ ಡಾ. ಸುಮಯೇಂದ್ರ ಕುಲ್ಕರ್ಣಿಯವರು ನಮಗೆ ಯಾವುದೇ ಹೆಚ್ಚುವರಿ ಜವಾಬ್ದಾರಿಗಳು

ಬೇಕಾಗಿರುವುದಿಲ್ಲ ದಿನನಿತ್ಯದ ಪಾಠ ಪ್ರವಚನಗಳನ್ನು ಮುಗಿಸಲು ಅವಕಾಶವನ್ನು ನೀಡಿ ಹೆಚ್ಚುವರಿ ಜವಾಬ್ದಾರಿಯಿಂದ ಬಿಡುಗಡೆಗೊಳಿಸಲು ಕೋರಿದರು.

(05) ವಿಶ್ವವಿದ್ಯಾನಿಲಯದ ಬೋಧಕೇತರ ಸಿಬ್ಬಂದಿಗಳ ಮುಂಬಡ್ತಿ ಕುರಿತು.

**ಚರ್ಚೆ:**

ಮಾನ್ಯ ಕುಲಸಚಿವರು ಸರ್ಕಾರ ಆದೇಶ ಸಂ: ಇಡಿ 81 ಯುಎನ್‌ಇ (1) 2022 ದಿನಾಂಕ 18.08.2023 ರನ್ವಯ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ (ರಾಯಚೂರು ವಿಶ್ವವಿದ್ಯಾಲಯ) ರಾಯಚೂರಿಗೆ 165 ಶಿಕ್ಷಕೇತರ ಹುದ್ದೆಗಳು ವರ್ಗಾವಣೆಗೊಂಡಿರುತ್ತವೆ ಮುಂದುವರೆದು ಸರ್ಕಾರದ ಆದೇಶದ ಸಂ.ಇಡಿ 103 ಯುಜಿವಿ2022(ಭಾಗ-1) ಬೆಂಗಳೂರು, ದಿನಾಂಕ: 10.03.2025 ರನ್ವಯ ಒಟ್ಟು 08 ಜನ ಸಿಬ್ಬಂದಿಗಳು ವರ್ಗಾವಣೆಗೊಂಡಿದ್ದು, ಅದರಲ್ಲಿ 02 ಬೋಧಕ ಸಿಬ್ಬಂದಿಗಳು ಹಾಗೂ 06 ಜನ ಬೋಧಕೇತರ ಸಿಬ್ಬಂದಿಗಳಿರುತ್ತಾರೆ. ಸದರಿ 06 ಜನ ಬೋಧಕೇತರ ಸಿಬ್ಬಂದಿಗಳಲ್ಲಿ 01 ಯುಜಿಸಿ ಸ್ಕೇಲ್ ಉಳಿದ 05 ಜನ ರಾಜ್ಯ ಸರ್ಕಾರದ ವೇತನವನ್ನು ಪಡೆಯುತ್ತಿರುತ್ತಾರೆ.ಮುಂದುವರೆದು ಬೋಧಕೇತರ ಸಿಬ್ಬಂದಿಗಳು ಮುಂಬಡ್ತಿ ನೀಡಬೇಕೆಂದು ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ. ಕಾರಣ ವಿಶ್ವವಿದ್ಯಾನಿಲಯದ ನಿಯಮಾನುಸಾರ ಬೋಧಕೇತರ ಸಿಬ್ಬಂದಿಗಳಿಗೆ ಮುಂಬಡ್ತಿ ನೀಡಲು ಇಲಾಖಾ ಪದೋನ್ನತಿ ಸಮಿತಿಯನ್ನು ರಚಿಸಿ ಸದರಿ ಸಮಿತಿಯ ಶಿಫಾರಸ್ಸಿನನ್ವಯ ಮುಂಬಡ್ತಿಯನ್ನು ನೀಡಲಾಗುವುದು ಎಂದು ಸಭೆಗೆ ತಿಳಿಸಿದರು.

**ನಿರ್ಣಯ :**

**ನಿಯಮಾನುಸಾರ ಕ್ರಮ ಕೈಗೊಳ್ಳಲು ಸಭೆಯು ಅನುಮೋದನೆಯನ್ನು ನೀಡಿತು.**

(06) ಬೋಧಕೇತರ ಹುದ್ದೆಗಳಿಗೆ ಸಂಬಂಧಿಸಿದಂತೆ 371(ಜೆ) ಮತ್ತು ಸಮಾಜ ಕಲ್ಯಾಣ ಇಲಾಖೆಯಿಂದ ರೋಸ್ಟರ್ ಗುರುತಿಸಿ, ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಸರ್ಕಾರದ ಅನುಮೋದನೆ ಪಡೆಯಲು ಪ್ರಸ್ತಾವನೆ ಸಲ್ಲಿಸುವುದು.

**ನಿರ್ಣಯ :**

**ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯು ಅನುಮೋದಿಸಿತು.**

(07) ಶ್ರೀ ಕಾಳರಾಜ ಸಿ. ಇವರ ಪತ್ರ ದಿನಾಂಕ 24.11.2025 ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯಕ್ಕೆ ಸಹಾಯಕ ಕಾರ್ಯಪಾಲಕ ಹುದ್ದೆಯ ನಿಯೋಜನೆ ಕುರಿತು.

**ನಿರ್ಣಯ:**

**ವಿಶ್ವವಿದ್ಯಾನಿಲಯದಲ್ಲಿ ಸಹಾಯಕ ಕಾರ್ಯಪಾಲಕ ಹುದ್ದೆಯು ಮಂಜೂರಾಗಿರುವುದಿಲ್ಲದ್ದರಿಂದ ಸದರಿ ಪ್ರಸ್ತಾವನೆಯನ್ನು ಕೈಬಿಡಲಾಯಿತು**

(08) ದಿನಗೂಲಿ ನೌಕರರ ಕುರಿತು

**ಚರ್ಚೆ:**

ಗುಲಬರ್ಗಾ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಕೇಂದ್ರವನ್ನು ಬೇರ್ಪಡಿಸಿ ಸ್ವತಂತ್ರ ವಿಶ್ವವಿದ್ಯಾನಿಲಯವನ್ನಾಗಿ ಘನ ಸರ್ಕಾರವು 2020 ರಲ್ಲಿ ಘೋಷಿಸಿರುತ್ತದೆ. ಸದರಿ ಸ್ನಾತಕೋತ್ತರ ಕೇಂದ್ರದಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ರಾಯಚೂರು ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸಲಾಗಿರುತ್ತದೆ ಮುಂದುವರೆದು ಸದರಿ ಸಿಬ್ಬಂದಿಗಳಲ್ಲಿ ವಿಶ್ವವಿದ್ಯಾನಿಲಯದಿಂದ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುವ ಸಂಬಂಧ ತೆಗೆದುಕೊಳ್ಳುವ ಸಂದರ್ಭದಲ್ಲಿ ಪರಿಗಣಿಸಲಾಗಿದ್ದು ಉಳಿದ ಸಿಬ್ಬಂದಿಗಳನ್ನು ದಿನಗೂಲಿ ಆಧಾರದ ಮೇಲೆ ಮುಂದುವರೆಸಲಾಗಿರುತ್ತದೆ. ಈಗಾಗಲೇ ಈ ವಿಷಯವಾಗಿ ಹಣಕಾಸು ಸಮಿತಿಯಲ್ಲಿ ಹಾಗೂ ಸರ್ಕಾರದ

ನಿರ್ದೇಶನದನುಸಾರ ದಿನಗೂಲಿ ನೌಕರರನ್ನು ಮುಂದುವರೆಸಬಾರದು ಎಂದು ತಿಳಿಸಲಾಗಿದೆ ಎಂದು ಸಭೆಗೆ ವಿವರಿಸಿದರು. ಕಾರಣ ಈಗಾಗಲೇ ಸುಮಾರು ವರ್ಷಗಳಿಂದ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರನ್ನು ಈ ಹಿಂದಿನಂತೆ ಹೊರಗುತ್ತಿಗೆ ಮೇಲೆ ಪಡೆದುಕೊಳ್ಳುವುದು ಸೂಕ್ತವೆಂದು ಸಭೆಗೆ ಮಾನ್ಯ ಕುಲಸಚಿವರು ವಿವಸಿದರು.

ನಿರ್ಣಯ:

**ಸಭೆಯು ಸದರಿ ವಿಷಯವನ್ನು ಚರ್ಚಿಸಿ ಹೊರಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಲು ಅನುಮೋದನೆ ನೀಡಿತು.**

(09) ಸಹಾಯಕ ಇಂಜಿನೀಯರ್‌ಗಳಾದ ಶ್ರೀ ಪಂಪಾಪತಿ ಇವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸುವ ಕುರಿತು.

**ಚರ್ಚೆ :**

ವಿಶ್ವವಿದ್ಯಾನಿಲಯದಲ್ಲಿ ಪೂರ್ಣ ಪ್ರಮಾಣದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರು ಇಲ್ಲದೇ ಇರುವುದರಿಂದ ವಿಶ್ವವಿದ್ಯಾನಿಲಯದ ಎಲ್ಲಾ ಕಟ್ಟಡ ಕಾಮಗಾರಿ ಕಾರ್ಯಗಳು, ದೈನಂದಿನ ಕಟ್ಟಡ ನಿರ್ವಹಣೆ ಕಾರ್ಯಗಳು, ನೀರು ಸರಬರಾಜು, ವಿದ್ಯುತ್‌ಗೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸಲು ಕಷ್ಟಸಾಧ್ಯವಾಗಿರುವುದರಿಂದ ಸೇವೆ ಅನುಭವದ ಆಧಾರದ ಮೇಲೆ ಈಗಾಗಲೇ ಎಸ್‌ಎಲ್‌ಎನ್ ಇಂಜಿನೀಯರಿಂಗ್ ಕಾಲೇಜಿನಲ್ಲಿ ಕಾರ್ಯನಿರ್ವಹಿಸಿದ ಅಭಿಯಂತರರನ್ನು ಕುಲಪತಿಗಳ ಅಧಿಕಾರದ ಅಡಿಯಲ್ಲಿ ಶ್ರೀ ಪಂಪಾಪತಿ ಇವರನ್ನು ಸಂಚಿತ ವೇತನ ಆಧಾರದ ಮೇಲೆ ಕಾರ್ಯನಿರ್ವಹಿಸಲು ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ ಎಂದು ಮಾನ್ಯ ಕುಲಸಚಿವರು (ಆಡಳಿತ) ಇವರು ಸಭೆಗೆ ತಿಳಿಸಿದರು ಈ ಸಂದರ್ಭದಲ್ಲಿ ಮಾನ್ಯ ಸಿಂಡಿಕೇಟ್ ಸದಸ್ಯರುಗಳಾದ ಶ್ರೀ ಜೀಶಾನ್ ಮತ್ತು ಇತರ ಸದಸ್ಯರುಗಳು ಸದರಿಯವರು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಹಾಗೂ ನೂತನ ವಿಶ್ವವಿದ್ಯಾನಿಲಯದ ನಿರ್ಮಾಣಕ್ಕೆ ಸಂಬಂಧಿಸಿದಂತೆ ಇಂಜಿನೀಯರಿಂಗ್ ವಿಭಾಗದ ಕರ್ತವ್ಯವು ಅತ್ಯಂತ ಅವಶ್ಯಕವಾಗಿರುತ್ತದೆ ಕಾರಣ ಈಗಾಗಲೇ ಸೇವಾ ನಿವೃತ್ತಿ ಹೊಂದಿರುವ ಸಿಬ್ಬಂದಿಯಿಂದ ಇಂತಹ ಅಧಿಕ ಕಾರ್ಯದೊತ್ತಡದ ಕಾರ್ಯವನ್ನು ನಿರ್ವಹಿಸುವುದು ಕಷ್ಟಸಾಧ್ಯವಾಗಿರುತ್ತದೆ ಎಂದು ಸಭೆಗೆ ತಿಳಿಸಿದರು ಇದಕ್ಕೆ ಉತ್ತರವಾಗಿ ಕುಲಸಚಿವರು (ಆಡಳಿತ) ಇವರು ವಿಶ್ವವಿದ್ಯಾನಿಲಯದಲ್ಲಿ ದೈನಂದಿನ ಕೆಲಸಕಾರ್ಯಗಳಿಗೆ ತೊಂದರೆಯಾಗದಂತೆ ಬೇರೊಬ್ಬರನ್ನು ನೇಮಕ ಮಾಡಿಕೊಂಡು ತದನಂತರ ಸದರಿಯವರನ್ನು ಬಿಡುಗಡೆ ಮಾಡುವುದು ಸೂಕ್ತ ಎಂದು ತಿಳಿಸಿದರು.

ನಿರ್ಣಯ :

**ವಿಶ್ವವಿದ್ಯಾನಿಲಯಕ್ಕೆ ತಾಂತ್ರಿಕ ಕೌಶಲ್ಯವುಳ್ಳ ಅನುಭವಿ ಸಹಾಯಕ ಅಭಿಯಂತರರ ಅಗತ್ಯವಿದ್ದು. ನಿವೃತ್ತಿ ಹೊಂದಿದ ಅಥವಾ ಗೌರವ ಸಂಭಾವನೆ ಮೇಲೆ ಆಸಕ್ತರ ಸೇವೆಯನ್ನು ಪಡೆದು ನಂತರ ಕ್ರಮ ವಹಿಸಲು ಸಭೆಯು ತಿರ್ಮಾನವನ್ನು ತೆಗೆದುಕೊಂಡಿತು.**

(10) ಹೊರಗುತ್ತಿಗೆ ಆಧಾರದ ಮೇಲೆ ಯುಯುಸಿಎಂಎಸ್ ತಾಂತ್ರಿಕ ಸಿಬ್ಬಂದಿಯಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ. ಮಂಜುನಾಥ ಇವರು ದೂರಿನ ಕುರಿತು.

**ಚರ್ಚೆ :**

ವಿಶ್ವವಿದ್ಯಾನಿಲಯದಲ್ಲಿ 36 ಜನ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಸಿಬ್ಬಂದಿಗಳನ್ನು ಒದಗಿಸಲು ಟೆಂಡರ್ ಮೂಲಕ ಪಾಸೋಡಿ ಅಂಡ್ಯ್ ಕಂಪನಿ, ಇವರಿಗೆ ಆದೇಶವನ್ನು ನೀಡಲಾಗಿರುತ್ತದೆ. ಸದರಿ ಕಂಪನಿಯ ಮೂಲಕ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಮಂಜುನಾಥ ಇವರು ವಿಶ್ವವಿದ್ಯಾನಿಲಯ ಕಾರ್ಯವೈಖರಿಯ ವಿಶ್ವವಿದ್ಯಾನಿಲಯದ ಸಂಚಿತ ವೇತನ ಆಧಾರದ ಮೇಲೆ ಮಾಡಿಕೊಂಡಿರುವ ನೇಮಕಾತಿ ಹಾಗೂ ಇನ್ನಿತರ ವಿಷಯಗಳ ಕುರಿತು ಮಾಹಿತಿಯನ್ನು ನೀಡಬೇಕೆಂದು ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ ಮುಂದುವರೆದು ಸದರಿಯುವರು ವಿಶ್ವವಿದ್ಯಾನಿಲಯದ ಆಡಳತಾತ್ಮಕ ವಿಷಯಗಳನ್ನು ಸಹಾ ಅನವಶ್ಯಕವಾಗಿ ಪ್ರಶ್ನೆಸಿರುತ್ತಾರೆ ಹಾಗೂ ಆಧಾರಗಳನ್ನು ನೀಡದೇ ವಿಶ್ವವಿದ್ಯಾನಿಲಯದಲ್ಲಿ ವರ್ಕ್‌ಪ್ರಮ್‌ಹೋಮ್ ಮುಖಾಂತರ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ

ಎಂದು ದೂರನ್ನು ಸಲ್ಲಿಸಿರುತ್ತಾರೆ. ಮುಂದುವರೆದು ಸದರಿಯವರು ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ ಇ-ಮೇಲ್ ಮುಖಾಂತರ ಸದರಿ ದೂರಿನ ಪ್ರತಿಯನ್ನು ಸಲ್ಲಿಸಿರುತ್ತಾರೆ. ಈ ರೀತಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯು ಆಧಾರರಹಿತವಾಗಿ ವಿಶ್ವವಿದ್ಯಾನಿಲಯವನ್ನು ದೂಷಿಸುವುದು ಗಂಭೀರವಾದ ವಿಷಯವಾಗಿರುತ್ತದೆ ಎಂದು ಸಭೆಗೆ ಮಾನ್ಯ ಕುಲಸಚಿವರು ತಿಳಿಸಿದರು ಮಾನ್ಯ ಸಿಂಡಿಕೇಟ್ ಸದಸ್ಯರುಗಳಾದ ಶ್ರೀ ಡಿ.ಆರ್.ಚಿನ್ನ ಮತ್ತು ಶ್ರೀ ಜೀಶಾನ್ ಅಖಿಲ್ ಸಿದ್ದಿಖಿ ಹಾಗೂ ಇತರರು ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ತಿಳಿಸಿದರು ಹಾಗೂ ಇವರ ದೂರಿನಲ್ಲಿರುವ ಸತ್ಯಾಸತ್ಯತೆಯನ್ನು ಅರಿಯಲು ಒಂದು ಸಮಿತಿಯನ್ನು ರಚಿಸಿ ಸದರಿ ಸಮಿತಿಯ ಶೀಫಾರಸ್ಸಿನನ್ವಯ ಕಾರ್ಯನಿರ್ವಹಿಸುವುದು ಸೂಕ್ತ ಎಂದು ತಿಳಿಸಿದರು. ಇದಕ್ಕೆ ಮಾನ್ಯ ಕುಲಪತಿಯವರು ಸಮಿತಿಯನ್ನು ರಚಿಸಿ ವರದಿ ಪಡೆಯಲು ಸಭೆಯು ತಿರ್ಮಾನಿಸಿತು.

**ನಿರ್ಣಯ:**

**ಸಿಂಡಿಕೇಟ್ ಸದಸ್ಯರುಗಳಾದ ಶ್ರೀ ಚಂದ್ರಶೇಖರ ಲಿಂಗದಳ್ಳಿ, ಇವರ ಅಧ್ಯಕ್ಷತೆಯಲ್ಲಿ ಶ್ರೀ ಶಿವಣ್ಣ ಮತ್ತು ಶ್ರೀ ಜೀಶಾನ್ ಅಖಿಲ್ ಸಿದ್ದಿಖಿ ಇವರನ್ನು ಸದಸ್ಯರನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸಲು ಹಾಗೂ ಸದರಿ ಸಮಿತಿಯು ಮುಂದಿನ ಸಿಂಡಿಕೇಟ್ ಸಭೆಯ ಒಳಗಾಗಿ ವರದಿಯನ್ನು ಸಲ್ಲಿಸಲು ತಿಳಿಸುತ್ತಾ ಅನುಮೋದನೆಯನ್ನು ನೀಡಿತು.**

(11) ದಿನಾಂಕ: 12.11.2025 ರಂದು ಜರುಗಿದ ಸಿಂಡಿಕೇಟ್ ಸಭೆಯ ವಿಷಯ ಕ್ರಮಾಂಕ 12 ವಿಷಯದ ನಿರ್ಣಯದ ಕುರಿತು ಚರ್ಚೆ.

**ಚರ್ಚೆ :**

ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗ, ಕ್ರೀಡಾ ವಿಭಾಗ ಮತ್ತು ಪರೀಕ್ಷಾ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಕೌಂಟೆಂಟ್, ಕ್ರೀಡಾ ಸಂಯೋಜಕರು ಮತ್ತು ತಾಂತ್ರಿಕ ಸಂಯೋಜಕರಾಗಿ ಸೇವೆ ಸಲ್ಲಿಸುತ್ತಿರುವ ಈ ಕೆಳಕಾಣಿಸಿದ ಸಿಬ್ಬಂದಿಗಳ ಸೇವಾ ಅವಧಿಯನ್ನು ಮುಂದುವರೆಸುವ ಮತ್ತು ಮಾಸಿಕ ಸಂಭಾವನೆ ಪರಿಷ್ಕರಣೆ ಚರ್ಚಿಸಲಾಗಿದೆ

| ಕ್ರ.ಸಂ | ಹೆಸರು | ಹುದ್ದೆ | ಪ್ರಸ್ತುತ ಪಡೆಯುತ್ತಿರುವ ಸಂಭಾವನೆ |
|---|---|---|---|
| 01 | ಶ್ರೀಮತಿ ವಿಜಯಲಕ್ಷ್ಮೀ ಆರ್ | ಅಕೌಂಟೆಂಟ್ | ರೂ. 35,000/- |
| 02 | ಶ್ರೀ ಗುರುಶಾಂತ ಬಿರಾದಾರ | ಯುಯುಸಿಎಂಎಸ್ ಕೋ-ಆರ್ಡಿನೇಟರ್ ಹಣಕಾಸು | ರೂ. 35,000/- |
| 03 | ಶ್ರೀ ಮಲ್ಲಿಕಾರ್ಜುನ ಎನ್ | ಸಂಯೋಜಕರು ಕ್ರೀಡಾ ವಿಭಾಗ | ರೂ. 32,000/- |

ಸಭೆಯ ತೀರ್ಮಾನವನ್ನು "ಸದರಿ ಸಿಬ್ಬಂದಿಗಳ ಸೇವಾ ಅವಧಿಯನ್ನು ಮುಂದುವರೆಸಲು ತೀರ್ಮಾನಿಸಲಾಯಿತು ಮತ್ತು ಸಂಭಾವನೆಯನ್ನು ಪರಿಷ್ಕರಿಸುವ ಬಗ್ಗೆ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಲು ತೀರ್ಮಾನಿಸಲಾಯಿತು" ಎಂದು ನಮೂದಿಸಲಾಗಿರುತ್ತದೆ. ಈ ಕುರಿತಂತೆ ಸಿಂಡಿಕೇಟ್ ಸದಸ್ಯರುಗಳಾದ ಶ್ರೀ ಜೀಶಾನ್ ಅಖಿಲ್ ಸಿದ್ದಿಕಿ, ಶ್ರೀ ಡಿ.ಆರ್.ಚಿನ್ನಾ ಮತ್ತು ಡಾ. ಮೀನಾಕ್ಷಿ ಖಂಡಿಮಠ ಇವರುಗಳು ಸದರಿ ವಿಷಯವನ್ನು ಮತ್ತೊಮ್ಮೆ ಚರ್ಚಿಸಲು ಅವಕಾಶವನ್ನು ನೀಡಬೇಕೆಂದು ತಿಳಿಸಿರುವ ಪ್ರಯುಕ್ತ ನೀಡಲಾಗಿರುತ್ತದೆ. ಶ್ರೀ ಜೀಶಾನ್ ಅಖಿಲ್ ಸಿದ್ದಿಕಿ ಅವರು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದಲ್ಲಿ ಯುಯುಸಿಎಂಎಸ್ ಕೋ-ಆರ್ಡಿನೇಟರ್ ಕಾರ್ಯನಿರ್ವಹಿಸುತ್ತಿರು ಶ್ರೀ ಗುರುಶಾಂತ ಬಿರಾದಾರ ಇವರ ನೇಮಕಾತಿಯು ಯಾವ ದಿನಾಂಕದಂದು ಜರುಗಿದ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಪಡೆದಿರುತ್ತದೆ ಹಾಗೂ ಇವರು ಮೊದಲು 36 ಜನ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದು ಇವರನ್ನು ಯಾವ ಮಾನದಂಡದ ಮೇಲೆ ಆಯ್ಕೆ ಮಾಡಿಕೊಳ್ಳಲಾಗಿದೆ ಎಂದು ಸಭೆಗೆ ತಿಳಿಸಲು ಕೇಳಿದರು ಇದಕ್ಕೆ ಉತ್ತರವಾಗಿ ಮಾನ್ಯ ಕುಲಸಚಿವರು ಹಣಕಾಸು ವಿಭಾಗದಲ್ಲಿ ಯುಯುಸಿಎಂಎಸ್ ತಾಂತ್ರಿಕ ಅಧಿಕಾರಿ (ತಾತ್ಕಾಲಿಕ) ಯಾಗಿ ಕಾರ್ಯನಿರ್ವಸುತ್ತಿರುವ ಶ್ರೀ. ಸಿ. ನಾಗರಾಜ ಇವರು ದಿನಾಂಕ 04.11.2024 ರ ತಮ್ಮ ಪತ್ರದನ್ವಯ ರಾಜಿನಾಮೆಯನ್ನು ಸಲ್ಲಿಸಿರುತ್ತಾರೆ. ದಿನಾಂಕ 15.11.2024 ರ ಆ ಸಮಯದ ಹಣಕಾಸು ಅಧಿಕಾರಿಗಳಾದ ಡಾ. ಶಂಕರ್ ವ್ಹಿ ಕೆ.ಎ.ಎಸ್ (ಆಯ್ಕೆ ಶ್ರೇಣಿ)

ಇವರು ಸದರಿ ಹುದ್ದೆಗೆ ಈಗಾಗಲೇ ಹಣಕಾಸು ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ. ಗುರುಶಾಂತ ಬಿರಾದಾರ ಇವರನ್ನು ಹಣಕಾಸು ವಿಭಾಗದ ಸೇವಾ ಅನುಭವದ ಆಧಾರದ ಮೇಲೆ ಯುಯುಸಿಎಂಎಸ್ ತಾಂತ್ರಿಕ ಸಂಯೋಜಕರೆಂದು ನೇಮಕ ಮಾಡಿಲು ಕುಲಸಚಿವರು (ಆಡಳಿತ) ಇವರಿಗೆ ಪತ್ರವನ್ನು ಸಲ್ಲಿಸಿರುತ್ತಾರೆ ಹಣಕಾಸು ಅಧಿಕಾರಿಗಳ ಶೀಫಾರಸ್ಸಿನನ್ವಯ ಕುಲಸಚಿವರ ಆದೇಶ ಸಂ: ರಾವಿರಾ/ಆಡಳಿತ/2024-25/ ದಿನಾಂಕ 10.01.2025 ರಂದು ಇವರನ್ನು ಮುಂಬರು ಸಿಂಡಿಕೇಟ್ ಸಭೆಯ ಅನುಸರ್ಮಥನೆಯ ಶರತ್ತಿಗೆ ಒಳಪಟ್ಟು ನೇಮಕಾತಿ ಮಾಡಲಾಗಿರುತ್ತದೆ ಹಾಗೂ ದಿನಾಂಕ 27.01.2025 ರ ವಿಷಯ ಕ್ರಮಾಂಕ 18 ರನ್ವಯ ನೇಮಕಾತಿಯನ್ನು ಅನುಮೋದಿಸಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

**ನಿರ್ಣಯ:**

**ಶ್ರೀಮತಿ, ವಿಜಯಲಕ್ಷ್ಮೀ ಆರ್, ಅಕೌಂಟೆಂಟ್, ಶ್ರೀ ಮಲ್ಲಿಕಾರ್ಜುನ ಎನ್, ಕ್ರೀಡಾ ಸಂಯೋಜಕರು ಇವರುಗಳ ಸೇವಾ ಅವಧಿಯನ್ನು ಮುಂದುವರೆಸಲು ಸಭೆಯು ತೀರ್ಮಾನಿಸಿತು ಮುಂದುವರೆದು ಶ್ರೀ ಗುರುಶಾಂತ ಬಿರಾದಾರ, ಯುಯುಸಿಎಂಎಸ್ ಕೋ-ಆರ್ಡಿನೇಟರ್ ಹಣಕಾಸು ಇವರ ಸೇವೆ ಅವಧಿಯನ್ನು ಮುಂದುವರೆಸುವ ಸಂಬಂಧ ಸುಧೀರ್ಘವಾಗಿ ಚರ್ಚಿಸಿದ ನಂತರ ಅಂತಿಮವಾಗಿ ಮಾನ್ಯ ಕುಲಪತಿಯವರ ವಿವೇಚಾನಾಧಿಕಾರಕ್ಕೆ ಸದರಿ ವಿಷಯದ ತಿರ್ಮಾನವನ್ನು ಬಿಡಲು ಸಭೆಯಲ್ಲಿ ತೀರ್ಮಾನಿಸಲಾಯಿತು**

(12) ಕೆಕೆಆರ್‌ಡಿಬಿ ಟೆಂಡರ್ ಕುರಿತು

**ಚರ್ಚೆ:**

ಸಿಂಡಿಕೇಟ್ ಸದಸ್ಯರುಗಳಾದ ಶ್ರೀ ಶ್ರೇಯಂಕ್ ಹೆಚ್.ವಿ., ಇವರು ಕೆಕೆಆರ್‌ಡಿಬಿ ಕಾಮಗಾರಿಗಳ ಪ್ರಗತಿಯ ಕುರಿತು ಸಭೆಗೆ ವಿವರಿಸುವಂತೆ ಕೋರಿದಾಗ ಮಾನ್ಯ ಕುಲಸಚಿವರು (ಆಡಳಿತ) ಇವರು ವಿವರಿಸುತ್ತಾ ದಿನಾಂಕ 27.01.2025 ರ ಸಿಂಡಿಕೇಟ್ ಸಾಮಾನ್ಯ ಸಭೆಯ ವಿಷಯ ಕ್ರಮಾಂಕ 14ರ ರನ್ವಯ ಆದೇಶ ಸಂ: ಕಕಪ್ರಅಮ/ಯೋಶಾ/ಪ್ರಾನಿ/ವಿಶ್ವವಿದ್ಯಾಲಯ/28/24-25/11271 ದಿನಾಂಕ 22.01.2025ರ ಪತ್ರದನ್ವಯ ನಾಲ್ಕು ಕಾಮಗಾರಿಗಳಿಗೆ ಮಂಡಳಿಯ ನಿಯಮಾನುಸಾರ ಕೆಟಿಪಿಪಿ ಕಾಯ್ದೆಯ ಅನುಸಾರ ಅನುಷ್ಠಾನ ಗೊಳಿಸಲು ನಿರ್ಧರಿಸಿ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆಯನ್ನು ಸಭೆಯು ನೀಡಿರುವ ಹಿನ್ನೆಲೆಯಲ್ಲಿ 2024-25ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ರಾಯಚೂರು ವಿಶ್ವವಿದ್ಯಾನಿಲಯಕ್ಕೆ ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಿದಂತೆ 04 ಕಾಮಗಾರಿಗಳು ಮಂಜೂರಾಗಿರುತ್ತವೆ.

| Sl. No | University work details | Estimate Cost (Rs in Crores) |
|---|---|---|
| 01 | Centre of Excellence in Artificial Intelligence at University | 9.24 |
| 02 | Purchase and installation of Laboratory equipment for PG students at University | 8.69 |
| 03 | Creation of Sports facility at University | 6.69 |
| 04 | Establishment of Science block (completion of ground floor and first floor) on turn key basis including civil, class room furniture, labarotary furniture at University | 9.68 |
| | Total | 34.30 |

ಸದರಿ ಕಾಮಗಾರಿಗಳಿಗೆ ವಿಶ್ವವಿದ್ಯಾನಿಲಯವು ಜಾಹಿರಾತು ನೀಡಿ ಕಾಲ್ ಫಾರ್ ಇಓಐ ನೋಟಿಫಿಕೇಶನ್ ಫಾರ್ ರೇಟ್ ಅರ್ರೈವಲ್ ಹೊರಡಿಸಿ ದರಪಟ್ಟಿಗಳನ್ನು ವಿವಿಧ ಸಂಸ್ಥೆಗಳಿಂದ ಪಡೆಯಲಾಗಿರುತ್ತದೆ. ಇದರಲ್ಲಿ ಎಸ್‌ಆರ್ ಐಟಂಗಳನ್ನು ಸರ್ಕಾರ ನಿಗದಿಪಡಿಸಿದ ದರದಂತೆ ಹಾಗೂ ನಾನ್ ಎಸ್‌ಆರ್ ಐಟಂಗಳನ್ನು ದರಪಟ್ಟಿ ಮತ್ತು ಜಮ್ ಪೋರ್ಟಲ್‌ಗಳಲ್ಲಿ ಪಡೆಯಲಾಗಿದೆ. ವಿವಿಧ ವಿಷಯ ತಜ್ಞರಗಳ ಶಿಫಾರಿಸ್ಸಿನಂತೆ ವಿಜ್ಞಾನ ಉಪಕರಣಗಳ ಪಟ್ಟಿ ಮಾಡಲಾಗಿದ್ದು ಸದರಿ ಪಟ್ಟಿಯಲ್ಲಿನ ಅಂದಾಜು ಮೊತ್ತಗಳನ್ನು ಸಮಿತಿಯ ಸಭೆಯಲ್ಲಿ ನಿರ್ಣಯಿಸಿ ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಮಂಜೂರಾತಿ ಪಡೆದು ತದನಂತರ ಕೆಟಿಪಿಪಿ ಜಾಲತಾಣದಲ್ಲಿ ದಿನಾಂಕ 29.07.2025 ರಂದು ಈ ಕೆಳಗಿನ ಮೂರು ಟೆಂಡರ್‌ಗಳನ್ನು ಕರೆಯಲಾಗಿದೆ.

1. ವಿಜ್ಞಾನ ವಿಭಾಗದ ನೆಲ ಮತ್ತು ಪ್ರಥಮ ಮಹಡಿಯ ಕಟ್ಟಡ ಕಾಮಗಾರಿ (ಟರ್ನ್ ಕೀ ಬೇಸೆಸ್)
2. ವಿಶ್ವವಿದ್ಯಾನಿಲಯದ ಆವರಣದಲ್ಲಿ ಕ್ರೀಡಾ ಸೌಲಭ್ಯ ಕಲ್ಪಿಸುವ ಕಾಮಗಾರಿ (ಟರ್ನ್ ಕೀ ಬೇಸೆಸ್)
3. ವಿಶ್ವವಿದ್ಯಾನಿಲಯದ ವಿಜ್ಞಾನ ವಿಭಾಗಗಳಿಗೆ ಉಪಕರಣಗಳ ಸರಬರಾಜು

ಈ ಮೂರು ಟೆಂಡರ್‌ಗಳಿಗೆ ದಿನಾಂಕ 29.08.2025 ರಂದು ಕೊನೆಯ ದಿನಾಂಕ ಎಂದು ನಿಗದಿಪಡಿಸಲಾಗಿತ್ತು. ಸಿವಿಲ್ ಕಾಮಗಾರಿಯನ್ನು ನಿರ್ವಹಿಸಬಹುದಾದ ಟೆಂಡರ್‌ಗಳ ಅಂದಾಜು ಪಟ್ಟಿಗಳಿಗೆ ಲೋಕೋಪಯೋಗಿ ಇಲಾಖೆಯ ತಾಂತ್ರಿಕ ಅನುಮೋದನೆಯನ್ನು ಪಡೆದು ಬಿಡ್‌ಗಳನ್ನು ಕರೆಯಲಾಗಿತ್ತು. ಟೆಂಡರ್‌ಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ ಕಾಮಗಾರಿವಾರು ಸಲ್ಲಿಕೆಯಾದ ಅರ್ಜಿಗಳ ತಾಂತ್ರಿಕ ಪರಿಶೀಲನೆಯನ್ನು 24.10.2025 ರಂದು ಪರಿಶೀಲನಾ ಸಮಿತಿಯು ಕೈಗೊಂಡು ತಾಂತ್ರಿಕವಾಗಿ ಅರ್ಹರಾದ ಆರ್ಥಿಕ ಬಿಡ್‌ಗಳನ್ನು ಕೆಟಿಪಿಪಿ ಜಾಲತಾಣದಲ್ಲಿ ತೆರೆದು ದಿನಾಂಕ 30.10.2025 ರಂದು ಜಾಲತಾಣದಲ್ಲಿ ಎಲ್‌ಓಐ ಅನ್ನು ನೀಡಲಾಗಿದೆ. ನಂತರ ಕೆಟಿಪಿಪಿ ಯಾಕ್ಟ್ ಪ್ರಕಾರ ದಿನಾಂಕ 14.11.2025 ರಂದು ಕಾಮಗಾರಿ ಆದೇಶವನ್ನು ನೀಡಲಾಗಿದೆ ಎಂದು ಸಭೆಗೆ ವಿವರಣೆಯನ್ನು ನೀಡಿದರು.

(13) ವಿಶ್ವವಿದ್ಯಾನಿಲಯದ ಜಾಲತಾಣ (ವೆಬ್‌ಸೈಟ್) ಕುರಿತು.

**ಚರ್ಚೆ :**

ಸಿಂಡಿಕೇಟ್ ಸದಸ್ಯರುಗಳಾದ ಶ್ರೀ ಡಿ.ಆರ್. ಚಿನ್ನಾ ಇವರು ವಿಶ್ವವಿದ್ಯಾನಿಲಯದಲ್ಲಿ ವೆಬ್‌ಸೈಟ್ ನಿರ್ವಹಣೆಯ ಬಗ್ಗೆ ಮಾಹಿತಿಯನ್ನು ಸಭೆಗೆ ವಿವರಿಸುವಂತೆ ಕೋರಿದಾಗ ಮಾನ್ಯ ಕುಲಸಚಿವರ ಈ ವಿಷಯವಾಗಿ ಈಗಾಗಲೇ ವಿಶ್ವವಿದ್ಯಾನಿಯದ ವತಿಯಿಂದ ಜಾಲತಾಣವನ್ನು ನಿರ್ವಹಿಸಲಾಗುತ್ತಿದೆ. ಮುಂದುವರೆದು ಸರ್ಕಾರದ ಆದೇಶದನುಸಾರ ಯೋಜನಾ ನಿರ್ದೇಶಕರು, ಕರ್ನಾಟಕ ವೆಬ್‌ಪೋರ್ಟಲ್, ಇ–ಆಡಳಿತ ಕೇಂದ್ರ, ಅಭಿವೃದ್ಧಿ ಪಡಿಸಿರುವ ಸಿಎಂಎಸ್‌ವಿ 4.0 ಟೆಂಪ್ಲೇಟ್‌ನಲ್ಲಿ ವಿಶ್ವವಿದ್ಯಾನಿಲಯದ ಜಾಲತಾಣವನ್ನು ನಿರ್ವಹಿಸಲು ತಿಳಿಸಿರುತ್ತಾರೆ ಎಂದು ಸಭೆಗೆ ತಿಳಿಸಿದರು.

**ನಿರ್ಣಯ :**

**ಸರ್ಕಾರದ ನಿರ್ದೇಶನದಂತೆ ವಿಶ್ವವಿದ್ಯಾನಿಲಯದ ಜಾಲತಾಣ ನಿರ್ವಹಣೆಯನ್ನು ಜರುಗಿಸಬೇಕೆಂದು ಸಭೆಯು ತೀರ್ಮಾನಿಸಿತು.**

ಕುಲಸಚಿವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಮಾನ್ಯ ಕುಲಪತಿಗಳಿಗೆ ಹಾಗೂ ಸರ್ವ ಗೌರವಾನ್ವಿತ ಸದಸ್ಯರುಗಳಿಗೆ ವಂದಿಸುವುದರೊಂದಿಗೆ ಸಭೆಯು ಮುಕ್ತಾಯವಾಯಿತು.

14/1      14/1/26

**ಡಾ. ಚನ್ನಪ್ಪ ಎ., ಕೆ.ಎ.ಎಸ್**
**ಕುಲಸಚಿವರು**
**ಹಾಗೂ ಸದಸ್ಯ ಕಾರ್ಯದರ್ಶಿಗಳು**
**ಅಧ್ಯಕ್ಷರುಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ**
**ರಾಯಚೂರು**

ಕುಲಸಚಿವರು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ
ರಾಯಚೂರು

**ಪ್ರೊ. ಶಿವಾನಂದ ಕೆಳಗಿನಮನಿ**
**ಕುಲಪತಿಗಳು**
**ಹಾಗೂ ಸಿಂಡಿಕೇಟ್ ಸಭೆಯ**
**ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ**
**ರಾಯಚೂರು**

ಕುಲಪತಿಗಳು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ
ರಾಯಚೂರು